ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಮಡಿಕೇರಿ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು

**ಪ್ರೊ. ಕೆ.ಆರ್. ದೀಕ್ಷಿತ್**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨

ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ-ಮೇಲ್: sahithya.academy@gmail.com

**MADIKERI:** An Introduction Book on Places in Karnataka that Played a Major Role in the Freedom Struggle, Written by Prof. K.R. Dixit, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಪ್ರೊ. ಕೆ.ಆರ್. ದೀಕ್ಷಿತ್

ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ “ಸ್ವಾತಂತ್ರ್ಯದ ಅಮೃತ ಮಹೋತ್ಸವ”ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ “ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ” ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.



**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಕೊಡಗು ಜಿಲ್ಲೆ ಕರ್ನಾಟಕದ ಅತಿ ಚಿಕ್ಕ ಜಿಲ್ಲೆಯಾಗಿದೆ. ಇದರ ಕೇಂದ್ರ ಸ್ಥಳ ಮಡಿಕೇರಿ ನಗರ. ಇದು ಅತ್ಯಂತ ಸುಂದರವಾಗಿದ್ದು ಮಂಜಿನ ನಗರಿ ಎಂಬ ಹೆಸರಿಗೆ ಪಾತ್ರವಾಗಿದೆ. ಬೆಟ್ಟಗುಡ್ಡಗಳಿಂದ ಕೂಡಿದ ಕಿರಿದಾದ ಅಂಕು-ಡೊಂಕು ರಸ್ತೆಗಳನ್ನು ಹೊಂದಿರುವ ಪಟ್ಟಣ ಇದಾಗಿದೆ. ಇದು ಕೊಡಗು ಜಿಲ್ಲೆಯ ಹೃದಯದಂತಿದೆ. ಬ್ರಿಟಿಷರ ವಿರುದ್ಧ ನಡೆಸಿದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಡಿಕೇರಿ ಬ್ರಿಟಿಷ್ ವಿರೋಧಿ ಬಂಡಾಯಗಾರರ, ಸತ್ಯಾಗ್ರಹಿಗಳ, ಅಹಿಂಸವಾದಿಗಳ, ಸ್ವಾತಂತ್ರ್ಯ ಹೋರಾಟಗಾರರ ತವರೂರಾಗಿತ್ತು. ಕೊಡಗಿನ ಜನರು ಯಾವುದೇ ಜಾತಿ ಭೇದವಿಲ್ಲದೆ. ಲಿಂಗ-ತಾರತಮ್ಯವಿಲ್ಲದೆ, ಪ್ರಾದೇಶಿಕ ತಾರತಮ್ಯವಿಲ್ಲದೆ, ಶ್ರೀಮಂತ-ಬಡವ, ಉಚ್ಚ-ನೀಚ ಎಂಬ ಪಕ್ಷಪಾತವಿಲ್ಲದೆ ವಯಸ್ಸಿನ ತಾರತಮ್ಯವಿಲ್ಲದೆ ಅಬಾಲವೃದ್ಧರಾಗಿಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ.

ಕೊಡಗಿನ ಮೂಲ ನಿವಾಸಿಗಳು ಧೈರ್ಯವಂತರು, ಸಾಹಿಸಿಗರು, ಪ್ರಾಮಾಣಿಕರು, ಸ್ವಾಮಿನಿಷ್ಠರು, ದೇಶಾಭಿಮಾನಿಗಳು, ಪ್ರಕೃತಿಯ ಆರಾಧಕರು, ಸ್ವಾಭಿಮಾನಿಗಳು, ಸ್ವಾವಲಂಬಿಗಳು, ಕಷ್ಟ-ಸಹಿಷ್ಣುಗಳು, ದೈಹಿಕ ಬಲಾಢ್ಯರು, ಕ್ರೀಡಾ ಮನೋಭಾವನೆ ಉಳ್ಳವರು, ಹಗಲು-ರಾತ್ರಿಯೆನ್ನದೆ ದುಡಿಯವವರು ಆಗಿರುತ್ತಾರೆ.

ಸ್ವಾತಂತ್ರ್ಯ ಹೋರಾಟಗಾರರು ಅನೇಕ ಕಡು ಕಷ್ಟಗಳಿಗೆ ಗುರಿಯಾಗಿದ್ದರು. ಆಸ್ತಿ-ಪಾಸ್ತಿ ಅಂತಸ್ತು ಕಳೆದುಕೊಂಡರು, ತಮ್ಮ ಬಹುಪಾಲು ಆಯಸ್ಸನ್ನು ಮತ್ತು ತಮ್ಮ ಅಮೂಲ್ಯ ಯೌವನವನ್ನು ಕಳೆದುಕೊಂಡರು. ಇವರು ಬ್ರಿಟಿಷ್ ಪೊಲೀಸರಿಂದ ಲಾಟಿ ಏಟಿನ ನೋವನ್ನು ಅನುಭವಿಸಿದರು.

ಬಂದನಕ್ಕೊಳಗಾದಾಗ ಜೈಲಿನಲ್ಲಿ ಅನೇಕ ಕಿರುಕುಳಗಳಿಗೆ ಗುರಿಯಾದರು. ಅವರನ್ನು ಪ್ರಾಣಿಗಳ ರೀತಿಯಲ್ಲಿ ಕಾಣಲಾಗುತ್ತಿತ್ತು. ಅವರಿಗೆ ಹುಳು ಬಿದ್ದ ಅಕ್ಕಿಯಿಂದ ಅನ್ನ ಮಾಡಿ, ಕೆಲವೊಮ್ಮೆ ತಂಗಳು ಆಹಾರ ನೀಡುವುದರ ಜೊತೆಗೆ, ಉಪ್ಪು ಜಾಸ್ತಿ ಹಾಕಿದ ಸಾರನ್ನು, ಮತ್ತೊಮ್ಮೆ ಉಪ್ಪು ಹಾಕಿರದ ಸಪ್ಪೆ ಸಾರನ್ನು ಬಡಿಸಲಾಗುತ್ತಿತ್ತು. ಅವರಿಗೆ ಅಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳು ಇರಲಿಲ್ಲ. ಅವರ ಆರೋಗ್ಯ ಈ ಕಾರಣಕ್ಕಾಗಿ ಹದಗೆಡುತ್ತಿತ್ತು. ಮಲಗಲು ಸ್ಥಳಗಳು ಇರುತ್ತಿರಲಿಲ್ಲ. ಸೊಳ್ಳೆ, ತಿಗಣೆ, ಜಿಗಣೆಗಳ ಕಾಟ ತೀವ್ರವಾಗಿತ್ತು. ಚಳಿಯಲ್ಲಿ ನಡುಗ ಬೇಕಾಗಿತ್ತು. ಮಳೆಯಲ್ಲಿ ನೆನೆಯಬೇಕಾಗಿತ್ತು. ಇಷ್ಟಾದರೂ ಸ್ವಾತಂತ್ರ್ಯ ಹೋರಾಟಗಾರರು ಜೈಲು ಶಿಕ್ಷೆ ಅನುಭವಿಸಿ ಹೊರಬಂದವರು ಪದೇ ಪದೇ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದರು. ಇದು ನಿಜಕ್ಕೂ ಹೆಮ್ಮೆಯ ಸಂಗತಿ.

ಮಡಿಕೇರಿಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಎಂಬ ಕಿರು ಹೊತ್ತಿಗೆಯನ್ನು ಬರೆಯಲು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಿ.ವಿ. ವಸಂತ್‌ಕುಮಾರ್‌ರವರು, ರಿಜಿಸ್ಟ್ರಾರ್‌ರವರು, ಸಂಪಾದಕರಾದ ಡಾ. ಎಸ್.ಜಿ. ರಾಮದಾಸ ರೆಡ್ಡಿಯವರು, ಶ್ರೀಮತಿ ರಾಜಲಕ್ಷ್ಮೀಯವರಿಗೆ ಹಾಗೂ ಸಹಕಾರ ನೀಡಿದ ನನ್ನ ಎಲ್ಲಾ ಸಹೋದ್ಯೋಗಿ ಮಿತ್ರರಿಗೆ ಈ ಮೂಲಕ ವಂದಿಸುತ್ತೇನೆ.

**– ಪ್ರೊ. ಕೆ.ಆರ್. ದೀಕ್ಷಿತ್**

# ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟದಲ್ಲಿ – ಮಡಿಕೇರಿ | ೧೫–೪೬ |
| • ಅನುಬಂಧ<br>ಛಾಯಾಚಿತ್ರಗಳು | ೪೭ |
| • ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೩ |

# ಸ್ವಾತಂತ್ರ್ಯ ಹೋರಾಟದಲ್ಲಿ ಮಡಿಕೇರಿ

ಕೊಡಗು ಬೆಟ್ಟಗುಡ್ಡಗಳಿಂದ ಕೂಡಿದ ಹಾಗೂ ಸಸ್ಯ ಸಮೃದ್ಧಿಯಿಂದ ಕೂಡಿದ ಸುಂದರವಾದ ಜಿಲ್ಲೆಯಾಗಿದೆ ಪ್ರಕೃತಿ ಶ್ರೀಯ ಬೆಡಗು ಬಿನ್ನಾಣ, ಲಾಸ್ಯ ಲಾವಣ್ಯಗಳಿಗೆ ದೇಶ-ವಿದೇಶಗಳಲ್ಲಿ ಪ್ರಸಿದ್ಧಿಯಾಗಿದೆ ವಿಸ್ತಾರವಾದ ಭಾರತ ದೇಶದಲ್ಲಿ ಕೊಡಗಿನ ಭೌಗೋಳಿಕ ಸ್ಥಾನ ಕಿರಿದಾದರೂ ಕೀರ್ತಿಯಲ್ಲಿ ಹಿರಿಯ ಸ್ಥಾನವನ್ನು ಪಡೆದುಕೊಂಡಿದೆ.

ಮನಮೋಹಕವಾದ ಪ್ರಾಕೃತಿಕ ಸೌಂದರ್ಯ, ಸಮೃದ್ಧ ಆರ್ಥಿಕ ಸಂಪನ್ಮೂಲಗಳು ಭಾರತದ ಪ್ರಸಿದ್ಧವಾದ ಪುಣ್ಯ ನದಿಗಳಲ್ಲಿ ಒಂದಾದ ಕಾವೇರಿ ನದಿಯ ಉಗಮಸ್ಥಾನ ಇಲ್ಲಿರುವುದು ವಿಶೇಷ ಕೊಡಗಿನ ಜನರ ವಿಶಿಷ್ಟ ಜೀವನ ವಿಧಾನ ಮನೋಹರವಾದ ಪ್ರಕೃತಿ ಸೌಂದರ್ಯಕ್ಕೆ ಆಕರ್ಷಿತರಾಗಿ ದೇಶ-ವಿದೇಶದ ಅನೇಕ ಮಹನೀಯರುಗಳು ಈ ಸುಂದರ ಜಿಲ್ಲೆಗೆ ಭೇಟಿ ನೀಡಿ ಅದರ ಸೊಬಗನ್ನು ಮನಸಾರೆ ವರ್ಣಿಸಿದ್ದಾರೆ. ಹಸಿರು ಬೆಟ್ಟ-ಗುಡ್ಡಗಳ ನಡುವಿನ ಕಣಿವೆಗಳಲ್ಲಿರುವ ಬತ್ತದ ಗದ್ದೆಯ ಬಯಲುಗಳು, ಸಾಲುಸಾಲಾಗಿ ತಲೆಯೆತ್ತಿರುವ ಎತ್ತರದ ಬೆಟ್ಟಗಳು ದಟ್ಟವಾದ ಅರಣ್ಯಗಳು ಸುಂದರವಾದ ಕಾಫಿ. ಏಲಕ್ಕಿ ಮತ್ತು ಕಿತ್ತಳೆ ತೋಟಗಳು ಕೊಡಗಿನ ನೈಸರ್ಗಿಕ ವೈಶಿಷ್ಟ್ಯಗಳಾಗಿವೆ ನಗರಗಳಲ್ಲಿನ ಯಾಂತ್ರಿಕ ಜೀವನ ಜನಜಂಗುಳಿಯ ಗೌಜು ಗದ್ದಲಗಳಿಗೆ ಒಳಗಾದವರು ಬಂದು ಇಲ್ಲಿನ ಪರಿಶುದ್ಧವಾದ ತಂಪಾದ ಗಾಳಿ ಪ್ರಕೃತಿ ಸೌಂದರ್ಯದ ಸುಖವನ್ನು ಅನುಭವಿಸುವಾಗ ಅವರಿಗೆ ವಿಶೇಷವಾದ ಆನಂದ ಮತ್ತು ಉತ್ಸಾಹಗಳು ಉಂಟಾಗುವುದರಲ್ಲಿ ಅನುಮಾನವಿಲ್ಲ. ಆಧುನಿಕ ಸಂಚಾರ ವ್ಯವಸ್ಥೆಗಳಾದ ರೈಲು, ವಿಮಾನ ಇವುಗಳ ಬಳಕೆ ಕೊಡಗಿನಲ್ಲಿ ಇನ್ನೂ ಕೂಡ ಜಾರಿಗೆ ಬಂದಿರುವುದಿಲ್ಲ. ಕೊಡಗಿನ ಜೇನು ಕೃಷಿ ದೇಶದಾದ್ಯಂತ

ಹೆಸರುವಾಸಿಯಾಗಿದೆ ಇದರ ಗುಣಮಟ್ಟ ಬಹಳ ವಿಶೇಷ, ಕಾಶ್ಮೀರ, ಹಿಮಾಲಯ ಪ್ರದೇಶಗಳ ರೀತಿ ವಿಶೇಷ ಔಷಧೀಯ ಗುಣಗಳನ್ನು ಇಲ್ಲಿನ ಜೇನು ತುಪ್ಪ ಹೊಂದಿದೆ.

ಕೊಡಗಿನ ಅರಣ್ಯಗಳು ಮತ್ತು ತೋಟಗಳು ಜಿಲ್ಲೆಯ ಆರ್ಥಿಕ ಬೆಳವಣಿಗೆಗೆ ಆಧಾರ ಸ್ತಂಭಗಳಾಗಿವೆ ಜಿಲ್ಲೆಯು ಸಂಪೂರ್ಣವಾಗಿ ಭೂಮಿಯಿಂದ ಆವೃತವಾಗಿದ್ದು ಸಾಗರದ ಸಂಪರ್ಕ ಇರುವುದಿಲ್ಲ ಪಶುಪಾಲನೆ, ವ್ಯಾಪಾರ ಮತ್ತು ವಾಣಿಜ್ಯೋದ್ಯಮ ರಂಗಗಳಲ್ಲಿ ಸ್ವಲ್ಪಮಟ್ಟಿಗೆ ಅಭಿವೃದ್ಧಿಯನ್ನು ಕಾಣಬಹುದು ಕೊಡಗು ಜಿಲ್ಲೆ ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವೈಶಿಷ್ಟ್ಯತೆಯನ್ನು ಉಳಿಸಿಕೊಂಡಿದೆ.

**ಕೊಡಗಿನ ಹೆಸರಿನ ಮೂಲ:**

ಕೊಡಗು ಪದದ ಮೂಲವನ್ನು ತಿಳಿಯುವುದು ಕಷ್ಟ ಕೊಡಗು ಎನ್ನುವುದು ಕೂಡು ಮಲೆನಾಡು ಎಂಬ ಪದದಿಂದ ರೂಪಾಂತರಗೊಂಡ ಶಬ್ದವಾಗಿದೆ. ಕೂಡು ಮಲೆನಾಡು ಎಂದರೆ ಎತ್ತರ ತಗ್ಗುಗಳಿಂದ ಮತ್ತು ಅರಣ್ಯ ಭಾಗಗಳಿಂದ ಕೂಡಿರುವ ಸ್ಥಳ ಎಂದು ಅರ್ಥ. ದಟ್ಟವಾದ ಕಾಡು ಪ್ರದೇಶವನ್ನು ಹೊಂದಿದೆ. ಕೊಡಗಿನ ಒಂದು ಶಾಸನದಲ್ಲಿ ಹುಡುಗುರು ನಾಡು ಎಂಬ ಉಲ್ಲೇಖ ಇದೆ. ಮತ್ಸ್ಯದೇಶ, ಬ್ರಹ್ಮ ದೇಶ, ಕ್ರೋಡ ದೇಶ ಎಂಬುದಾಗಿ ಪೌರಾಣಿಕ ಹೆಸರುಗಳು ಇದ್ದ ಬಗ್ಗೆ ಮಾಹಿತಿ ಇದೆ.

ಕೊಡಗು ಜಿಲ್ಲೆಯನ್ನು ಆಂಗ್ಲರ ಕಾಲದಲ್ಲಿ ಕೂರ್ಗ್ ಎಂದು ಕರೆಯಲಾಗುತ್ತಿತ್ತು ಈಗ ಮತ್ತೆ ಹಿಂದಿನ ಹೆಸರಾದ ಕೊಡಗು ಎಂದೇ ಚಿರಪರಿಚಿತವಾಗಿದೆ. ಕೊಡಗು ಜಿಲ್ಲೆಯನ್ನು ಭಾರತದ ಸ್ವಿಟ್ಜರ್ಲ್ಯಾಂಡ್ ಎಂದು ಹಾಗೂ ಭಾರತದ ಸ್ಕಾಟ್ಲ್ಯಾಂಡ್ ಎಂದು ಜೊತೆಗೆ ದಕ್ಷಿಣದ ಕಾಶ್ಮೀರ ಎಂದು ಪ್ರಖ್ಯಾತಿಯನ್ನು ಪಡೆದಿದೆ ಕೊಡಗು ಜಿಲ್ಲೆಯ ಜಿಲ್ಲಾಕೇಂದ್ರ ಮಡಿಕೇರಿ ಪಟ್ಟಣವು ಆಗಿರುತ್ತದೆ. ಇದನ್ನು ಬ್ರಿಟಿಷರು ಮರ್ಕರ್ ಎಂದು ಕರೆಯುತ್ತಿದ್ದರು.

**ಕೊಡಗಿನ ಸ್ಥಾನ ನಿರ್ದೇಶನ ಮತ್ತು ಮೇರೆಗಳು:**

ಕರ್ನಾಟಕ ರಾಜ್ಯದಲ್ಲಿ ಕೊಡಗು ಜಿಲ್ಲೆಯು ಅತ್ಯಂತ ಎತ್ತರದ ಪ್ರದೇಶವಾಗಿದೆ. ಪಶ್ಚಿಮ ಘಟ್ಟಗಳ ಪೂರ್ವ ಮತ್ತು ಪಶ್ಚಿಮ ಇಳಿಜಾರು



ಪ್ರದೇಶಗಳನ್ನು ಒಳಗೊಂಡಿದೆ. ರಾಜ್ಯದ ನೈರುತ್ಯ ಮೂಲೆಯಲ್ಲಿ ಕೊಡಗು ಜಿಲ್ಲೆಯು ಇದೆ. ದಕ್ಷಿಣೋತ್ತರವಾಗಿ ಬ್ರಹ್ಮಗಿರಿ ಬೆಟ್ಟದಿಂದ ಹೇಮಾವತಿ ನದಿಯವರೆಗೆ ಗರಿಷ್ಠ ಉದ್ದವು ೯೬ ಕಿಲೋಮೀಟರ್ ಮತ್ತು ಪೂರ್ವಪಶ್ಚಿಮವಾಗಿ ಕುಶಾಲನಗರದಿಂದ ಸಂಪಾಜೆಯವರೆಗೆ ಗರಿಷ್ಠ ಅಗಲವು ಅರವತ್ತು ನಾಲ್ಕು ಕಿಲೋಮೀಟರ್ ಇರುತ್ತದೆ. ಕೊಡಗು ಜಿಲ್ಲೆಯ ಉತ್ತರಕ್ಕೆ ಹಾಸನ ಮತ್ತು ದಕ್ಷಿಣಕನ್ನಡ ಜಿಲ್ಲೆಗಳನ್ನು ಪೂರ್ವಕ್ಕೆ ಮೈಸೂರು ಮತ್ತು ಹಾಸನ ಜಿಲ್ಲೆಗಳನ್ನು ಪಶ್ಚಿಮಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳ ರಾಜ್ಯವನ್ನು ಮತ್ತು ದಕ್ಷಿಣಕ್ಕೆ ಕೇರಳ ರಾಜ್ಯವನ್ನು ಮೇರೆಗಳಾಗಿ ಹೊಂದಿದೆ.

**ಕೊಡಗಿನ ವಿಸ್ತೀರ್ಣ ಮತ್ತು ಜನಸಂಖ್ಯೆ:**

ಕೊಡಗು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೪೧೦೨ ಚದರ ಕಿಲೋಮೀಟರ್ ಆಗಿದ್ದು, ಬೆಂಗಳೂರು ನಗರ ಜಿಲ್ಲೆಯ ನಂತರ ಇದು ಕರ್ನಾಟಕ ರಾಜ್ಯದ ಅತ್ಯಂತ ಚಿಕ್ಕ ಜಿಲ್ಲೆಯಾಗಿದೆ. ಜಿಲ್ಲೆಯ ವಿಸ್ತೀರ್ಣ ರಾಜ್ಯದ ವಿಸ್ತೀರ್ಣದಲ್ಲಿನ ೧೯೧೭೯೧ ಚದರ ಕಿಲೋಮೀಟರ್‌ನ ಶೇಕಡ ೨. ೧೪ ಆಗಿರುತ್ತದೆ. ಇದು ವಿರಳ ಜನ ಸಾಂದ್ರತೆ ಇರುವ ಜಿಲ್ಲೆಯಾಗಿದೆ. ಈ ಜಿಲ್ಲೆಯು ಇಂದು ಐದು ತಾಲೂಕುಗಳನ್ನು ಒಳಗೊಂಡಿದೆ. ಮಡಿಕೇರಿ ಸೋಮವಾರಪೇಟೆ, ವಿರಾಜಪೇಟೆ, ಪೊನ್ನಂಪೇಟೆ ಮತ್ತು ಕುಶಾಲನಗರ ತಾಲೂಕುಗಳನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ ಒಟ್ಟು ೧೬ ಹೋಬಳಿಗಳಿವೆ ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿ ನಗರಸಭೆ ಕಾರ್ಯ ನಿರ್ವಹಿಸುತ್ತಿದೆ.

**ಕೊಡಗಿನ ನದಿಗಳು:**

ಕೊಡಗಿನಲ್ಲಿ ಪ್ರಮುಖವಾಗಿ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ, ಹಾರಂಗಿ, ಬರಪೊಳೆ ಇವು ಮುಖ್ಯ ನದಿಗಳಾಗಿವೆ ಇದರ ಜೊತೆಗೆ ಕನ್ನಿಕೆ ಕಾಡನೂರು, ಕಕ್ಕಬ್ಬೆ ಚಿಕ್ಕಹೊಳೆ, ಹಟ್ಟಿಹೊಳೆ ಇವೇ ಮೊದಲಾದ ಉಪನದಿಗಳು ಕೊಡಗು ಜಿಲ್ಲೆಯಲ್ಲಿ ಹರಿಯುತ್ತಿವೆ. ಹೇಮಾವತಿ, ಹಾರಂಗಿ, ಲಕ್ಷ್ಮಣ ತೀರ್ಥ ಇವುಗಳು ಕಾವೇರಿ ನದಿಯ ಉಪನದಿಗಳಾಗಿವೆ. ಕಾವೇರಿ ನದಿ. ಕೊಡಗು ಜಿಲ್ಲೆಯ ಭಾಗಮಂಡಲದ ಸಮೀಪ ಪಶ್ಚಿಮ ಘಟ್ಟಗಳ ಬ್ರಹ್ಮಗಿರಿ ಬೆಟ್ಟದಲ್ಲಿ ಸಮುದ್ರಮಟ್ಟಕ್ಕಿಂತ ೧೩೫೬ ಮೀಟರುಗಳಷ್ಟು ಎತ್ತರದಲ್ಲಿ ಕಾವೇರಿ

ಉಗಮಿಸುತ್ತಾಳೆ ಇದರ ಉಗಮ ಸ್ಥಾನಕ್ಕೆ ತಲಕಾವೇರಿ ಎಂದು ಹೆಸರು. ಈ ನದಿ ಉಗಮ ಸ್ಥಾನದಿಂದ ಸಿದ್ದಾಪುರದವರೆಗೆ ಆಗ್ನೇಯ ಅಭಿಮುಖವಾಗಿ ಹರಿದು ಅಲ್ಲಿಂದ ಈಶಾನ್ಯದಿಕ್ಕಿನಲ್ಲಿ ಹರಿಯುವ ಕಾವೇರಿ ಅನೇಕ ಉಪನದಿಗಳನ್ನು ಸೇರಿಸಿಕೊಳ್ಳುತ್ತದೆ. ತಲಕಾವೇರಿಯಿಂದ ೫ ಕಿಲೋಮೀಟರ್ ದೂರದ ಭಾಗಮಂಡಲದಲ್ಲಿ ಕಾವೇರಿಯನ್ನು ಕನ್ನಿಕ ನದಿಯು ಸೇರಿಕೊಳ್ಳುತ್ತದೆ ಭಾಗಮಂಡಲದಲ್ಲಿ ಸುಜ್ಯೋತಿ ಎಂಬ ನದಿ ಅಂತರ್ ವಾಹಿನಿಯಾಗಿ ಹರಿದು ಕನ್ನಿಕಾ ನದಿ ಕಾವೇರಿ ನದಿ ಸಂಗಮ ಸ್ಥಳದಲ್ಲಿ ಕೂಡಿಕೊಳ್ಳುತ್ತವೆ ಎಂಬ ನಂಬಿಕೆ ಇದೆ. ಆದುದರಿಂದ ಭಾಗಮಂಡಲವು ತ್ರಿವೇಣಿ ಸಂಗಮ ಕ್ಷೇತ್ರ ಎಂದು ಹೆಸರಾಗಿದೆ. ಅಲ್ಲಿಂದ ಆರು ಕಿಲೋಮೀಟರ್ ದೂರದಲ್ಲಿ ಪುಲಿಕೋಟು ಬಳಿ ತಂತ್ರಿನದಿ ೭ ಕಿಲೋಮೀಟರ್ ದೂರದಲ್ಲಿ ಚರಂಡೇಟಿ ಚೆರವುಹೊಳೆ, ಮುಂದೆ ನಾಪೋಕ್ಲುವಿನ ಬಳಿ ಕಕ್ಕಬೆ ಹೊಳೆ ಕಾವೇರಿಯನ್ನು ಸೇರುತ್ತದೆ. ವಿರಾಜಪೇಟೆಯಲ್ಲಿ ಕಾಡನೂರು ಹೊಳೆ ಎಡೆ ನಾಲ್ಕು ನಾಡುನಲ್ಲಿ ಕುಮ್ಮ ಹೊಳೆಯು ಕಾವೇರಿಯನ್ನು ಕೂಡಿಕೊಳ್ಳುತ್ತದೆ. ಮಡಿಕೇರಿ ಶ್ರೇಣಿಯ ದಕ್ಷಿಣದ ಜಲಾನಯನ ಪ್ರದೇಶದಿಂದ ಹರಿದುಬರುವ ಮುತ್ತಾರು ಮುಡಿ ಹೊಳೆ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ಈ ಭಾಗದಲ್ಲಿ ಇನ್ನೊಂದು ನದಿಯಾದ ಚಿಕ್ಕಹೊಳೆ ಉತ್ತರದಲ್ಲಿ ಕಾವೇರಿಯನ್ನು ಸಂಗಮಿಸುತ್ತದೆ ನಂತರದಲ್ಲಿ ಕಾವೇರಿಯನ್ನು ಸೇರುವ ಮುಖ್ಯ ನದಿಯೆಂದರೆ ಹಾರಂಗಿ ನದಿ.

### ಹಾರಂಗಿ ನದಿ:

ಮಡಿಕೇರಿ ಪೀಠ ಭೂಮಿಯಿಂದ ಹರಿದುಬರುವ ಹಟ್ಟಿಹೊಳೆಯು ಕೋಟೆ ಬೆಟ್ಟದಿಂದ ಹರಿದು ಬರುವ ಮಾದಾಪುರದ ಹೊಳೆಯು ಗರಗಂದೂರು ಎಂಬಲ್ಲಿ ಹಾರಂಗಿ ಎಂಬ ದೊಡ್ಡ ಹೊಳೆಯಾಗುತ್ತದೆ. ಸೋಮವಾರಪೇಟೆ ಬೆಟ್ಟದಿಂದ ಹರಿದು ಬರುವ ಕಕ್ಕೆ ಹೊಳೆಯು ಹಾರಂಗಿಯನ್ನು ಕೂಡಿಕೊಳ್ಳುತ್ತದೆ ಮಡಿಕೇರಿ ತಾಲೂಕಿನ ಬೆಟ್ಟದಲ್ಲಿ ಹಾರಂಗಿ ನದಿ ಉಗಮ ಆಗುತ್ತದೆ. ಈ ನದಿ ಕುಶಾಲನಗರದ ಉತ್ತರದಲ್ಲಿ ಕೂಡಿಗೆ ಎಂಬಲ್ಲಿ ಕಾವೇರಿ ನದಿಯನ್ನು ಸೇರಿಕೊಳ್ಳುತ್ತದೆ. ಕಾವೇರಿ ಮತ್ತು ಹಾರಂಗಿ ನದಿಗಳು ಕೂಡಿಗೆಯಲ್ಲಿ ಸಂಗಮಿಸುವುದರಿಂದ ಆ ಸ್ಥಳಕ್ಕೆ ಕೂಡಿಗೆ ಎಂಬ ಹೆಸರು ಬಂದಿದೆ. ಹಾರಂಗಿ ನದಿಗೆ ಹುದುಗೂರು ಎಂಬಲ್ಲಿ ಹಾರಂಗಿ ಜಲಾಶಯವನ್ನು ನಿರ್ಮಾಣ



ಮಾಡಲಾಗಿದೆ. ಈ ಜಲಾಶಯ ಸಾವಿರಾರು ಹೇಕ್ಟೇರ್ ಪ್ರದೇಶಗಳಿಗೆ ನೀರನ್ನು ಉಣ್ಣಿಸುತ್ತದೆ.

### ಹೇಮಾವತಿ ನದಿ:

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಬಲ್ಲಾಳರಾಯನ ದುರ್ಗದ ಹತ್ತಿರದ ಜಾವಳಿ ಎಂಬಲ್ಲಿ ಹುಟ್ಟಿ ಹರಿಯುವ ಹೇಮಾವತಿ ನದಿಯು ಹಾಸನ ಜಿಲ್ಲೆಯಲ್ಲಿ ಹರಿದು ಸ್ವಲ್ಪ ದೂರ ಉತ್ತರ ಕೊಡಗಿನ ಗಡಿಯಾಗಿ ಹರಿಯುತ್ತದೆ ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರದಲ್ಲಿ ನೈಋತ್ಯದಲ್ಲಿ ಕಾವೇರಿ ನದಿಯನ್ನು ಸೇರಿಕೊಳ್ಳುತ್ತದೆ

### ಲಕ್ಷ್ಮಣ ತೀರ್ಥ ನದಿ:

ಕಾವೇರಿ ನದಿಯ ಉಪನದಿಗಳಲ್ಲಿ ಲಕ್ಷ್ಮಣತೀರ್ಥ ನದಿಯು ಒಂದು ಇದು ಕೊಡಗಿನ ದಕ್ಷಿಣ ಭಾಗದಲ್ಲಿರುವ ಬ್ರಹ್ಮಗಿರಿಯ ದೇವಾಸಿ ಬೆಟ್ಟದಲ್ಲಿ ಮುನಿ ಕಾಡು ಅರಣ್ಯ ಪ್ರದೇಶದಲ್ಲಿ ಹುಟ್ಟುತ್ತದೆ. ಲಕ್ಷ್ಮಣ ತೀರ್ಥ ಹಾಗೂ ಇದರೊಡನೆ ಸಂಗಮಿಸುವ ರಾಮತೀರ್ಥ ಮತ್ತು ಕೆರೆ ನದಿಗಳು ಸೇರಿಕೊಳ್ಳುತ್ತವೆ. ಈ ನದಿಯು ಇರ್ಪು ಎಂಬ ಸ್ಥಳದಲ್ಲಿ ಜಲಪಾತವನ್ನು ಸೃಷ್ಟಿಸಿದೆ. ಲಕ್ಷ್ಮಣತೀರ್ಥ ಮುಂದೆ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನಲ್ಲಿ ಹರಿದು ಕೃಷ್ಣರಾಜನಗರ ತಾಲೂಕನ್ನು ಪ್ರವೇಶಿಸಿ ಸಾಗರಕಟ್ಟೆ ಬಳಿ ಕಾವೇರಿ ನದಿಯನ್ನು ಸೇರುತ್ತದೆ.

### ಭರಪೊಳೆ ನದಿ:

ಭರಪೊಳೆ ನದಿಯು ಕೊಡಗಿನ ಪಶ್ಚಿಮಕ್ಕೆ ಹರಿಯುವ ಪ್ರಮುಖ ನದಿ ಬ್ರಹ್ಮಗಿರಿ ಬೆಟ್ಟಗಳ ತಪ್ಪಲಲ್ಲಿ ಹುಟ್ಟುವ ನದಿ ಕೆಂಗನ್ ಹೊಳೆ ಮತ್ತು ಕಟ್ಟು ಎಂಬ ಎರಡು ಸಣ್ಣ ತೊರೆಗಳನ್ನು ಕೂಡಿಕೊಂಡು ಬೆಟ್ಟಗಳ ನಡುವೆ ಪಶ್ಚಿಮಾಭಿಮುಖವಾಗಿ ಹರಿಯುತ್ತದೆ. ಮುಂದೆ ಭರಪೊಳೆಯನ್ನು ಸಾರತ್ ಹೊಳೆ ಕೂಡಿಕೊಳ್ಳುತ್ತದೆ. ಇಲ್ಲಿ ದೊಡ್ಡ ಬಂಡೆಯೊಂದರ ಮೇಲೆ ಧುಮುಕಿ ೧೩೪ ಮೀಟರ್ ಆಳದ ಸುಂದರವಾದ ಜಲಪಾತವನ್ನು ನಿರ್ಮಿಸಿದೆ. ಇದನ್ನು ಅಬಿ ಎಂದು ಕರೆಯುತ್ತಾರೆ. ಇದು ಬಿಟ್ಟಂಗಾಲ ಗ್ರಾಮದ ಬಳಿ ಇದೆ ಮುಂದೆ

ಈ ನದಿ ಕೇರಳದತ್ತ ಸಾಗಿ ಕೊಡಗಿನ ಗಡಿಯ ಬಳಿ ಮತ್ತೊಂದು ಜಲಪಾತವನ್ನು ನಿರ್ಮಿಸಿದೆ. ಈ ಜಲಪಾತದ ನೋಟ ರಮಣೀಯ ಚಿತ್ತಾಕರ್ಷಕವಾಗಿದೆ. ಕೇರಳದ ರಾಜ್ಯವನ್ನು ಪ್ರವೇಶಿಸಿ ಮುಂದೆ ಅರಬ್ಬಿ ಸಮುದ್ರವನ್ನು ಸೇರುತ್ತದೆ

**ಕುಮಾರಧಾರ ನದಿ:**

ಈ ನದಿ ಸುಬ್ರಮಣ್ಯ ಬೆಟ್ಟಗಳ ಸಾಲಿನಲ್ಲಿ ಹುಟ್ಟಿ ಸ್ವಲ್ಪ ದೂರ ಹಾಸನಜಿಲ್ಲೆಯ ಮಂಜರಾಬಾದ್ ಅಥವಾ ಸಕಲೇಶಪುರ ತಾಲೂಕು ಮತ್ತು ಕೊಡಗು ಜಿಲ್ಲೆಯಲ್ಲಿ ಹರಿದು ಬಿಸಿಲೆ ಘಾಟಿನ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಉತ್ತರ ಮೇಲೆಯಾಗಿ ನೇತ್ರಾವತಿ ನದಿಯನ್ನು ಸೇರುತ್ತದೆ.

ಕೊಡಗಿನಲ್ಲಿ ಇತರ ನದಿಗಳಾದ ಡಿಜೆ ಕಲ್ಲು ಹೊಳೆ ಸಂಪಾಜೆಯಲ್ಲಿ ಹುಟ್ಟಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿದು ಕೇರಳ ರಾಜ್ಯವನ್ನು ಸೇರುತ್ತದೆ ಸೋಮವಾರಪೇಟೆ ತಾಲೂಕಿನ ರಂಗಸಮುದ್ರ ಎಂಬ ಹಳ್ಳಿಯಲ್ಲಿ ಚಿಕ್ಕಲಿ ಹೊಳೆ ಹರಿಯುತ್ತದೆ. ಇದಕ್ಕೆ ಕಿರಿದಾದ ಅಣೆಕಟ್ಟನ್ನು ಕಟ್ಟಿ ನೀರಾವರಿಗಾಗಿ ನೀರನ್ನು ಬಳಸಿಕೊಳ್ಳಲಾಗುತ್ತಿದೆ.

ಮಡಿಕೇರಿಗೆ ಐದು ಕಿಲೋಮೀಟರ್ ದೂರದಲ್ಲಿ ಮಡಿಕೇರಿ ಹೊಳೆಯು ಎತ್ತರದಿಂದ ಕೆಳಕ್ಕೆ ತುಂತುರು ಹನಿಗಳಾಗಿ ಬೀಳುತ್ತದೆ ಇದು ಅಬ್ಬಿ ಜಲಪಾತ ಎಂದು ಪ್ರಸಿದ್ಧಿಯನ್ನು ಪಡೆದಿದೆ ಈ ಜಲಪಾತ ಒಂದು ರಮಣೀಯವಾದ ಸ್ಥಳವಾಗಿದೆ. ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

**ವಾಯುಗುಣ:**

ಸಾಮಾನ್ಯವಾಗಿ ಕೊಡಗು ಜಿಲ್ಲೆಯ ವಾಯುಗುಣ ಹಿತಕರವಾಗಿದೆ. ಶೀತಲ ಮತ್ತು ಆಹ್ಲಾದಕರ ವಾಯುಗುಣವು ಕೊಡಗಿನ ವಿಶಿಷ್ಟತೆಯಾಗಿದೆ. ಕೊಡಗು ಜಿಲ್ಲೆಯ ಪ್ರದೇಶಗಳು ಮಲೆನಾಡು ವಾಯುಗುಣವನ್ನು ಹೊಂದಿದೆ. ಇಲ್ಲಿ ೪೦೦೦ ಮಿಲಿಮೀಟರಿಗಿಂತಲೂ ಹೆಚ್ಚು ಮಳೆಯಾಗುತ್ತದೆ. ಒಂದು



ವರ್ಷವನ್ನು ನಾಲ್ಕು ಋತುಗಳನ್ನು ವಿಭಾಗಿಸಲಾಗಿದೆ. ಚಳಿಗಾಲ ಜನವರಿ–ಫೆಬ್ರವರಿವರೆಗೆ, ಬೇಸಿಗೆಕಾಲ ಮಾರ್ಚಿಯಿಂದ ಮೇವರೆಗೆ, ನೈರುತ್ಯ ಮಾನ್ಸೂನ್ ಕಾಲ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ, ಈಶಾನ್ಯ ಮಾನ್ಸೂನ್ ಅಕ್ಟೋಬರ್ ನಿಂದ ಡಿಸೆಂಬರ್‌ವರೆಗೆ ಎಂದು ವಿಂಗಡಿಸಲಾಗಿದೆ.

**ಕೊಡಗಿನ ಇತಿಹಾಸ:**

ಕೊಡಗಿನ ಇತಿಹಾಸವನ್ನು ಇತಿಹಾಸ ಪೂರ್ವ ಕಾಲ ಮತ್ತು ಇತಿಹಾಸ ಕಾಲ ಎಂದು ವಿಂಗಡಿಸಲಾಗಿದೆ. ಪ್ರಾಚೀನ ಮಾನವನು ಬಳಸುತ್ತಿದ್ದ ವಸ್ತುಗಳ ಆಧಾರದ ಮೇಲೆ ಇತಿಹಾಸವನ್ನು ತಿಳಿಯುವ ಕಾಲಕ್ಕೆ ಇತಿಹಾಸ ಪೂರ್ವ ಕಾಲ ಎಂದು ಕರೆಯುತ್ತಾರೆ. ಲಿಖಿತ ಆಧಾರಗಳನ್ನು ಅನುಸರಿಸಿ ಇತಿಹಾಸವನ್ನು ತಿಳಿಯುವ ಕಾಲವನ್ನು ಇತಿಹಾಸ ಕಾಲ ಎಂದು ಕರೆಯಲಾಗಿದೆ.

ಕೊಡಗಿನಲ್ಲಿ ಇತಿಹಾಸ ಪೂರ್ವಕಾಲದಲ್ಲಿ ಬುಡಕಟ್ಟು ಜನಾಂಗಗಳಿಗೆ ಸಂಬಂಧಿಸಿದ ಬೃಹತ್ ಶಿಲಾಯುಗದ ನಿವೇಶನಗಳು ಕಂಡುಬಂದಿವೆ. ಕ್ರಿಸ್ತಪೂರ್ವದ ಕಾಲದಲ್ಲಿ ಬೇಟೆ ಮತ್ತು ಕೃಷಿ ಮಾಡಿ ಜೀವನ ನಡೆಸಿದ ಮಾಹಿತಿಗಳು ತಿಳಿದುಬರುತ್ತದೆ.

ಬೃಹತ್ ಶಿಲಾಯುಗದ ಅನೇಕ ವಸತಿ ಕೇಂದ್ರಗಳು ಕೊಡಗಿನಲ್ಲಿ ಕಂಡುಬರುತ್ತದೆ. ಪಾಂಡವರ ಪಾರೆ ಮತ್ತು ಪಾಂಡವರ ಮನೆ ಎಂದು ಪರಿಚಿತವಾದ ಕಲ್ಲು ಚಪ್ಪಡಿಗಳಿಂದ ಮಾಡಿದ ಡಾಲ್‌ಮೆನ್ ಸ್ಮಾರಕಗಳು ಹಲವಾರು ಕಡೆ ಕಂಡುಬರುತ್ತದೆ. ಅಂದಗೋವೆ, ಕೊಡಗರಹಳ್ಳಿ, ಬಾಳುಗೋಡು, ಬಸವನಹಳ್ಳಿ, ಚಿಕ್ಕಬೆಟ್ಟಗೇರಿ, ಚಿಕ್ಕಲೂರು, ಹೊಸಕೋಟೆ, ಕೂಡ್ಲೂರು ಮುಂತಾದ ಕಡೆಗಳಲ್ಲಿ ಇಂತಹ ಸ್ಮಾರಕಗಳು ಕಂಡುಬಂದಿವೆ.

ಕೊಡಗಿನ ಇತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ಗಂಗರಸರ ಕಾಲದಿಂದ ಮಾನವನ ಚಟುವಟಿಕೆಗಳ ವಿವರಣೆಗಳು ನೀಡುವ ಚಿತ್ರಗಳು ಸಿಗುತ್ತವೆ. ಆದರೆ ಆಗ ಜನವಸತಿ ತೀರ ವಿರಳವಾಗಿತ್ತು. ಇದರಿಂದ ಆರಂಭಿಸಿ ಚೋಳರು, ಹೊಯ್ಸಳರು, ಕೊಂಗಾಳ್ವರು, ಚೆಂಗಾಳ್ವರು, ಕೆಳದಿಯ ನಾಯಕರು, ಕೊಡಗಿನ ಒಡೆಯರ ಅಥವಾ ರಾಜರ ಕಾಲದವರೆಗೂ ನೂರಕ್ಕೂ ಹೆಚ್ಚು ಶಾಸನಗಳು ದೊರಕಿವೆ,

ಕೊಡಗಿನ ರಾಜರ ಬಗ್ಗೆ 'ರಾಜೇಂದ್ರ ನಾಮೆ' ಎಂಬ ಕೃತಿ ಮಡಿಕೇರಿ ಜಿಲ್ಲಾ ಕಚೇರಿಯಲ್ಲಿರುವ ಅರಮನೆಯ ದಾಖಲೆಗಳು 'ಲಿಂಗರಾಜೇಂದ್ರ ಹುಕುಂ' ನಾಮಗಳು ಸಮಕಾಲೀನ ಈಸ್ಟ್ ಇಂಡಿಯ ಕಂಪನಿಯ ಅಧಿಕಾರಿಗಳ ವರದಿಗಳು ಮುಖ್ಯವಾದವು. ಬೆಂಗಳೂರು, ಮದ್ರಾಸ್, ಮುಂಬೈ ಸರ್ಕಾರಗಳ ಪತ್ರಾಗಾರಗಳಲ್ಲಿ ಕೊಡಗಿನ ಬಗ್ಗೆ ಸಾಕಷ್ಟು ದಾಖಲೆಗಳಿವೆ,

೧೦ನೇ ಶತಮಾನಕ್ಕೆ ಮೊದಲು ಬೆಟ್ಟಗುಡ್ಡ ಪ್ರದೇಶಗಳಿಂದ ಆವೃತ್ತವಾದ ಅಡವಿಗಳಲ್ಲಿ ದುರ್ಗಮವಾದ ಪ್ರದೇಶಗಳಲ್ಲಿ ಬೆಟ್ಟ ಕುರುಬರು, ಜೇನು ಕುರುಬರು, ಯರವರು ಮುಂತಾದ ಬುಡಕಟ್ಟು ಜೊತೆಗೆ ಕೊಡವರು ಗೌಡ ಜನಾಂಗದವರು ಇಲ್ಲಿ ನೆಲೆನಿಂತರು. ಗಂಗ, ಚೋಳರ ಕಾಲದಲ್ಲಿ ಅಲ್ಲಿನ ಜನಸಂಖ್ಯೆ ಬಾರಿ ಕಡಿಮೆ ಇತ್ತು. ಮುಂದೆ ಕೊಡಗಿನ ರಾಜರು ಪತನಾನಂತರ ಕಾಫಿ ತೋಟಗಾರಿಕೆ ಬೆಳೆದು ಜನಸಂಖ್ಯೆ ಹೆಚ್ಚುತ್ತಾ ಬಂತು. ಪಟ್ಟಣಗಳು ಬೆಳೆದವು, ಬ್ರಿಟಿಷರ ಕಾಲದಲ್ಲಿ ಶಿಕ್ಷಣ ಸೌಲಭ್ಯ ವಿಸ್ತರಿಸಿ ಸಾರಿಗೆ ಅನುಕೂಲತೆಯು ಹೆಚ್ಚಿತು.

ಕೊಡಗಿನ ಇತಿಹಾಸವು ವೀರ ರಾಜನಿಂದ ಆರಂಭವಾಗುತ್ತದೆ. ಬಿದನೂರಿನ ರಾಜ ಪುತ್ರನಾದ ಇವನು ೧೬೬೩ ರಲ್ಲಿ ಕೊಡಗಿನ ಸುಂಠಿಕೊಪ್ಪ ಸಮೀಪ ಹಾಲೇರಿ ಎಂಬ ಗ್ರಾಮದಲ್ಲಿ ಒಂದು ರಾಜಮನೆತನವನ್ನು ಸ್ಥಾಪನೆ ಮಾಡಿದರು, ಅಂದಿನಿಂದ ೧೮೩೪ ರಲ್ಲಿ ಬ್ರಿಟಿಷರ ವಶ ಆಗುವವರೆಗೂ ಕೊಡಗು ಹಾಲೇರಿ ವಂಶಸ್ಥರ ಅಧೀನದಲ್ಲಿತ್ತು, ಇವರು ವೀರಶೈವರು ವೀರರಾಜ ಮತ್ತು ಅಪ್ಪಾಜಿರಾಯನ ಕಾಲದಲ್ಲಿ ಸ್ಥಳೀಯ ಪಾಳೆಗಾರರನ್ನು ಸೋಲಿಸಿ ಅವರನ್ನು ಅಧೀನರನ್ನಾಗಿ ಮಾಡಿಕೊಂಡು ಕೊಡಗು ರಾಜ್ಯವನ್ನು ವಿಸ್ತರಿಸಿದರು ಅನಂತರ ೧೬೮೭ ರವರೆಗೆ ಅಧಿಕಾರ ನಡೆಸಿದ ಮುತ್ತುರಾಜನು ಮಡಿಕೇರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ಒಂದು ಅರಮನೆಯನ್ನು ನಿರ್ಮಿಸಿ ಕೋಟೆ ಕೊತ್ತಲುಗಳಿಂದ ಭದ್ರಪಡಿಸಿದರು.

ನಂತರ ದೊಡ್ಡವೀರಪ್ಪ ೧೬೮೭ ರಿಂದ ೧೭೩೬ ರವರೆಗೆ ನಂತರ ಅವನ ಮಗ ಚಿಕ್ಕ ವೀರಪ್ಪ ೧೮೩೬ ರಿಂದ ೧೭೬೬ರವರೆಗೆ ರಾಜ್ಯಭಾರ ಮಾಡಿದನು. ಈ ಅವಧಿಯಲ್ಲಿ ಮೈಸೂರಿನ ಹೈದರಾಲಿಯ ಕಣ್ಣು ಕೊಡಗಿನ ಮೇಲೆ ಬಿದ್ದಿತ್ತು ಇದರಿಂದಾಗಿ ಕೊಡಗಿನ ಕೆಲವು ಪ್ರದೇಶಗಳು ಕೈಬಿಟ್ಟು ಹೋದವು. ಪುತ್ರ ಸಂತಾನವಿಲ್ಲದ ಚಿಕ್ಕ ವೀರಪ್ಪನ ಮರಣಾನಂತರ ಅವರ



ಸಂಬಂಧಿ ದಾಯಾದಿಗಳಾದ ಹಾಲೇರಿಯ ಮುದ್ದುರಾಜ ಮತ್ತು ಹೊರಮಲ್ಲಯ್ಯ, ಮುದ್ದಯ್ಯರಾಜ ಇವರುಗಳು ಆಳ್ವಿಕೆ ನಡೆಸಿದರು, ದಾಯಾದಿಗಳ ಕಚ್ಚಾಟದ ಹಗರಣದಲ್ಲಿ ಹೈದರನ ನೆರವು ಪಡೆದ ಮುದ್ದುರಾಜನ ಮಗ ಅಪ್ಪಾಜಿರಾಯ ಕೊಡಗಿನ ದೊರೆಯಾದನು. ೧೭೭೬ ರಲ್ಲಿ ಅಪ್ಪಾಜಿರಾಯ ಕಾಲವಾದ ಮೇಲೆ ಲಿಂಗರಾಜ ಅಧಿಕಾರಕ್ಕೆ ಬಂದನು ಇವನು ೧೭೮೦ ರಲ್ಲಿ ಅಕಾಲ ಮರಣ ಹೊಂದಿದನು ಅವನ ಇಬ್ಬರು ರಾಜಕುಮಾರರು ಅಪ್ರಾಪ್ತ ರಾಗಿದ್ದರು ಇವರ ರಕ್ಷಣೆಯನ್ನು ಹಾಗೂ ಆಡಳಿತ ಸೂತ್ರವನ್ನು ಹೈದರಾಲಿಯು ವಹಿಸಿಕೊಂಡನು, ಅಪ್ರಾಪ್ತ ರಾಜಕುಮಾರರನ್ನು ಗೌಪ್ಯ ಸ್ಥಳದಲ್ಲಿ ಇಡಲಾಗಿತ್ತು ಇದರ ವಿರುದ್ಧ ಕೊಡಗಿನ ಜನ ೧೭೮೨ ರಲ್ಲಿ ಹೈದರಾಲಿಯ ವಿರುದ್ಧ ದಂಗೆಯೆದ್ದರು. ಅದೇ ವರ್ಷ ಅಧಿಕಾರಕ್ಕೆ ಬಂದ ಹೈದರಾಲಿಯ ಮಗ ಟಿಪ್ಪುವಿನ ಕಾಲದಲ್ಲಿ ಕೊಡಗು ಅವನ ಅಧೀನದಲ್ಲೇ ಮುಂದುವರಿಯಿತು ೧೭೮೯ರ ಟಿಪ್ಪು ವಿರುದ್ಧ ಕೊಡಗಿನ ಜನ ಭೀಕರ ಹೋರಾಟವನ್ನು ನಡೆಸಿದರು, ಆದರೆ ಅದು ಫಲಪ್ರದವಾಗಲಿಲ್ಲ.

ಈ ಮಧ್ಯೆ ಪಿರಿಯಾಪಟ್ಟಣದ ಜೈಲಿನಿಂದ ತಪ್ಪಿಸಿಕೊಂಡ ಕೊಡಗಿನ ರಾಜನಾದ ಲಿಂಗರಾಜನ ಹಿರಿಯ ಮಗನಾದ ವೀರರಾಜೇಂದ್ರನು ೧೭೬೦ ರಿಂದ ೧೮೦೯ ರವರೆಗೆ ಕೊಡಗನ್ನು ಸೇರಿ ಟಿಪ್ಪು ಸುಲ್ತಾನನನ್ನು ಎದುರಿಸುವ ಪ್ರಯತ್ನವನ್ನು ನಡೆಸಿದನು. ಮುಂದೆ ಟಿಪ್ಪು ಸುಲ್ತಾನ್ ಇಂಗ್ಲಿಷರೊಡನೆ ಹೋರಾಟದಲ್ಲಿ ನಿರತನಾಗಿದ್ದ ಸಂದರ್ಭವನ್ನು ಬಳಸಿಕೊಂಡು ಸ್ವತಂತ್ರ ನಾಗುವ ಪ್ರಯತ್ನ ಮಾಡಿದನು, ಪರಿಣಾಮವಾಗಿ ಕೊಡಗು ಟಿಪ್ಪುಸುಲ್ತಾನನಿಂದ ಸ್ವತಂತ್ರವಾಗಿ ಉಳಿಯುವಂತಾಯಿತು.

ವೀರರಾಜೇಂದ್ರ ೧೭೬೧ ರಿಂದ ೧೮೦೯ ರವರೆಗೆ ಇವನನ್ನು 'ದೊಡ್ಡ ವೀರರಾಜೇಂದ್ರ' ಮತ್ತು 'ವೀರರಾಜ' ಎಂಬ ಹೆಸರಿನಿಂದಲೂ ಕರೆಯುವುದು ರೂಢಿಯಲ್ಲಿದೆ. ಪಿರಿಯಾಪಟ್ಟಣದ ಸೆರೆಮನೆಯಲ್ಲಿದ್ದ ಇವನು ಹೇಗೋ ಅಲ್ಲಿಂದ ತಪ್ಪಿಸಿಕೊಂಡು ಕೊಡಗು ಸೇರಿ ಕೊಂಡನು. ಈ ಮಧ್ಯೆ ಹೈದರನ ಕ್ರೂರ ಕೃತ್ಯಗಳಿಂದ ದಿಕ್ಕು ಕಾಣದಂತಾಗಿ ಕಾಡು ಸೇರಿದ್ದ ಕೊಡಗಿನ ಜನ ವೀರ ರಾಜೇಂದ್ರನನ್ನು ಸೇರಿಕೊಂಡರು. ಒಂದು ಸೈನ್ಯ ಪಡೆಯನ್ನು ತಯಾರು ಮಾಡಿ ಕೊಡಗಿನಲ್ಲಿ ನೆಲೆಯೂರಿದ್ದ ಮೈಸೂರು ಸೈನ್ಯ ಹಾಗೂ ಹೈದರ್

ಕಾಲದಲ್ಲಿ ಹೊಸದಾಗಿ ತಂದು ನೆಲೆಯೂರಿ ಸಿದ್ದ ವಲಸಿಗರನ್ನು ಹೊರದೂಡುವ ಪ್ರಯತ್ನವನ್ನು ಮಾಡಿದನು.

೧೭೮೯ರಲ್ಲಿ ವೀರರಾಜೇಂದ್ರನು ಗೆಲುವು ಪಡೆದು ಕುಶಾಲನಗರ ನಾಡು, ಬೆಪ್ಪುನಾಡು ಭಾಗಮಂಡಲ ಕೋಟೆಗಳು ವೀರರಾಜೇಂದ್ರನ ವಶವಾದವು. ಮಲಬಾರಿನಲ್ಲಿ ನಡೆದ ದಂಗೆಗಳಿಂದ ಟಿಪ್ಪು ಹತಾಶನಾದನು, ಹಾಗಾಗಿ ಕೊಡಗು ಸ್ವತಂತ್ರವಾಯಿತು.

೧೭೯೦ ರಲ್ಲಿ ಆರಂಭವಾದ ಮೂರನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಬ್ರಿಟಿಷರು ಕೊಡಗಿನ ರಾಜನಾದ ವೀರರಾಜೇಂದ್ರನೊಡನೆ ಸಂಧಾನ ಮಾಡಿಕೊಂಡರು. ತಲಚೇರಿಯಲ್ಲಿದ್ದ ಬ್ರಿಟಿಷ್ ಅಧಿಕಾರಿ ರಾಬರ್ಟ್ ಟೈಲರ್ ವೀರರಾಜೇಂದ್ರನೊಡನೆ ವ್ಯವಹರಿಸಿ ಸಹಾಯಕ ಸೈನ್ಯ ಪದ್ಧತಿ ಕರಾರಿಗೆ ಸಹಿ ಮಾಡಿಸಿಕೊಂಡರು. ಆ ಪ್ರಕಾರ ಇಂಗ್ಲಿಷ್ ಕಂಪನಿಯು ಕೊಡಗಿನ ರಕ್ಷಣೆಯ ಹೊಣೆಯನ್ನು ಹೊತ್ತುಕೊಂಡು ಕೊಡಗಿನ ಅರಸನು ಬ್ರಿಟಿಷರಿಗೆ ರಾಜ್ಯದಲ್ಲಿ ಮುಕ್ತ ವ್ಯಾಪಾರ ಸೌಲಭ್ಯ ದೊರಕಿಸಿಕೊಟ್ಟರು.

೧೭೯೯ರಲ್ಲಿ ಟಿಪ್ಪುಸುಲ್ತಾನನು ಯುದ್ಧಭೂಮಿಯಲ್ಲಿ ಮರಣ ಹೊಂದಿದ ನಂತರ ಈ ಸುದ್ದಿಯನ್ನು ತಿಳಿದ ಕೊಡಗಿನ ರಾಜ ವೀರರಾಜೇಂದ್ರನು ಹರ್ಷಗೊಂಡನು. ಬ್ರಿಟಿಷ್ ಜನರಲ್ ಹ್ಯಾರಿಸ್ ಟಿಪ್ಪುಸುಲ್ತಾನನ ಕೆಲವು ಕುದುರೆಗಳನ್ನು, ಅಂಬಾರಿ ಮೊದಲಾದುವುಗಳನ್ನು ಬಳುವಳಿಯಾಗಿ ನೀಡಿದನು. ಟಿಪ್ಪುವಿನ ರಾಜ್ಯವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಮಿತ್ರಪಕ್ಷಗಳಾದ ಮರಾಠರು, ಮೈಸೂರಿನ ಒಡೆಯರು, ಹೈದರಾಬಾದಿನ ನಿಜಾಮ ಮತ್ತು ಇಂಗ್ಲಿಷರು ಹಂಚಿಕೊಂಡ ಮೇಲೆ ಕೊಡಗು ಮತ್ತು ಮೈಸೂರಿನ ಗಡಿಯನ್ನು ಸ್ಪಷ್ಟವಾಗಿ ಗುರುತಿಸಲಾಯಿತು. ಎರಡನೇ ಬಾರಿಗೆ ಸಂಭವಿಸಿದ ಸ್ನೇಹ ಒಪ್ಪಂದದಲ್ಲಿ ಕೊಡಗಿನ ರಾಜ ವೀರರಾಜೇಂದ್ರನು ಇಂಗ್ಲಿಷರಿಗೆ ಸ್ವಯಂ ಪ್ರೇರಣೆಯಿಂದ ವರ್ಷಕ್ಕೆ ೨೪,೦೦೦ ರೂಪಾಯಿಗಳು ನೀಡಲು ಸಮ್ಮತಿಸಿದನು, ವೀರರಾಜನು ೧೮೦೯ ರಲ್ಲಿ ಮರಣ ಹೊಂದಿದನು.

ಲಿಂಗರಾಜೇಂದ್ರ (೧೮೧೧ ರಿಂದ ೧೮೨೦ ರವರೆಗೆ.) ಪುತ್ರ ಸಂತಾನವಿಲ್ಲದ ವೀರರಾಜೇಂದ್ರ ತನ್ನ ಹಿರಿಯ ಮಗಳಾದ ದೇವಮ್ಮಾಜಿಗೆ



ಉತ್ತರಾಧಿಕಾರವನ್ನು ನೀಡಿದನು. ಸೋದೆಯ ಬಸವ ಲಿಂಗರಾಜನು ದಿವಾನರಾಗಿ ಆಡಳಿತ ನಡೆಸಿದರು, ಈ ಮಧ್ಯೆ ವೀರರಾಜೇಂದ್ರನ ತಮ್ಮ ಲಿಂಗರಾಜೇಂದ್ರ ೧೮೧೧ ರಲ್ಲಿ ತಾನೇ ರಾಜನೆಂದು ಘೋಷಿಸಿಕೊಂಡನು, ಈ ಬಗ್ಗೆ ಅಸಮ್ಮತಿ ಇದ್ದರು ಮೇಲ್ನೋಟಕ್ಕೆ ಅವನನ್ನೇ ರಾಜನೆಂದು ಒಪ್ಪಿಕೊಂಡರು. ಅಧಿಕಾರವಹಿಸಿಕೊಂಡ ಲಿಂಗರಾಜೇಂದ್ರ ಅನೇಕ ಉಗ್ರ ಕ್ರಮಗಳನ್ನು ಕೈಗೊಂಡು ಆಂತರಿಕ ಶತ್ರುಗಳನ್ನು ನಿಗ್ರಹಿಸಿದರು, ಮಡಿಕೇರಿಯಲ್ಲಿ ಒಂದು ಅರಮನೆಯನ್ನು ಹಾಗೂ ಓಂಕಾರೇಶ್ವರ ದೇವಾಲಯವನ್ನು ನಿರ್ಮಿಸಿದನು. ಇವನ ಮಗನೇ ಚಿಕ್ಕವೀರ ರಾಜೇಂದ್ರ ಕೊಡಗಿನ ಹಾಲೇರಿ ಮನೆತನದ ಕೊನೆಯ ಅರಸನಾಗಿ ಚಿಕ್ಕವೀರರಾಜೇಂದ್ರ ತಾರುಣ್ಯದಲ್ಲೇ ಸಿಂಹಾಸನ ಗಿಟ್ಟಿಸಿದ. ಇವನು ಸಾಹಸ ಪ್ರಿಯನು ಆಗಿದ್ದನು, ಈತನ ತಂದೆ ಲಿಂಗರಾಜ ನಿಂದ ಅಧಿಕಾರ ಕಳೆದುಕೊಂಡಿದ್ದ ದೇವಮ್ಮಾಜಿ ಅವಳ ಪತಿ ಚನ್ನಬಸವ ಇಂಗ್ಲಿಷರ ಬಳಿ ಹೋಗಿ ಪಿತೂರಿ ಮಾಡಬಹುದೆಂದು ಅನುಮಾನ ಇವನಿಗೆ ಇದ್ದಿದ್ದು ಹಾಗಾಗಿ ಅನುಮಾನ ಬಂದವರನ್ನೆಲ್ಲಾ ಅತ್ಯುಗ್ರಕ್ರಮಗಳಿಂದ ಅಡಗಿಸಿದನು. ಅನೇಕರ ಕೊಲೆಯೂ ಆಯಿತು, ಈ ನಡುವೆ ಕೊಡಗಿನಿಂದ ಪಲಾಯನಗೈದ ದೇವಮ್ಮಾಜಿ ಮತ್ತು ಅವಳ ಪತಿ ಚನ್ನಬಸಪ್ಪ ಮೈಸೂರಿನಲ್ಲಿದ್ದ ರೆಸಿಡೆಂಟರ ಬಳಿ ದೂರು ನೀಡಿ ಅವನ ಆಶ್ರಯದಲ್ಲಿ ಉಳಿದರು.

ಚಿಕ್ಕ ವೀರ ರಾಜೇಂದ್ರ ದುರಾಡಳಿತದ ಬಗ್ಗೆ ಮೈಸೂರಿನಲ್ಲಿದ್ದ ರೆಸಿಡೆಂಟ್ ಕಾರಣ ಕೇಳಿ ಚಿಕ್ಕವೀರರಾಜೇಂದ್ರನಿಗೆ ಪತ್ರ ಬರೆದನು., ಬ್ರಿಟಿಷರು ಮತ್ತು ಚಿಕ್ಕವೀರರಾಜೇಂದ್ರನ ನಡುವಿನ ಸಂಬಂಧ ಬಿಗಡಾಯಿಸಿತು. ಈ ವಿಚಾರವನ್ನು ಈ ರೆಸಿಡೆಂಟರ್ ಗವರ್ನರ್ ಜನರಲ್‌ನಿಗೆ ತಪ್ಪು ವರದಿ ನೀಡಿದನು, ಇಂಗ್ಲಿಷರ ಆಶ್ರಯ ಪಡೆದಿರುವ ರಾಜದ್ರೋಹಿ ಚನ್ನಬಸಪ್ಪನನ್ನು ತನಗೆ ಒಪ್ಪಿಸುವಂತೆ ಮೈಸೂರಿನ ಕಮಿಷನರ್ ಆಗಿದ್ದ ಕರ್ನಲ್ ಬ್ರಿಕ್ಸ್‌ಗೆ ಮನವಿ ಅರ್ಪಿಸಲಾಯಿತು ಆದರೆ ಅದು ಫಲಕಾರಿಯಾಗಲಿಲ್ಲ.

**ಚಿಕ್ಕವೀರರಾಜೇಂದ್ರ ಮತ್ತು ಬ್ರಿಟಿಷರ ನಡುವಿನ ವಿರಸ:**

ಚಿಕ್ಕವೀರರಾಜೇಂದ್ರನ ಬಗ್ಗೆ ಬ್ರಿಟಿಷ್ ಸರ್ಕಾರಕ್ಕೆ ಅವನೊಬ್ಬ ದುರಾಡಳಿತಗಾರ, ನೀಚ, ಕ್ರೂರಿ, ಪ್ರಜಾಪೀಡಕ ಮುಂತಾದ ವರದಿಗಳು

ಹೋಗುತ್ತಲೇ ಇತ್ತು. ಇದರ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲು ಈಸ್ಟ್ ಇಂಡಿಯಾ ಕಂಪನಿಯು ಕರುಣಾಕರ ಮೆನೋನ್ ಎಂಬುವನನ್ನು ಕೊಡಗಿಗೆ ಕಳಿಸಿಕೊಟ್ಟಿದ್ದು ಆದರೆ ಅವನು ಗೂಢಚರ್ಯ ಮಾಡುತ್ತಿದ್ದಾನೆಂದು ಅವನನ್ನು ಬಂಧಿಸಿ ಸೆರೆಮನೆಯಲ್ಲಿ ಇಡಲಾಯಿತು.

ಇದೆಲ್ಲಾ ಬ್ರಿಟಿಷರು ಕೊಡಗು ಪ್ರದೇಶವನ್ನು ವಶಪಡಿಸಿಕೊಳ್ಳಲು ಮಾಡಿದ ಹುನ್ನಾರವಾಗಿತ್ತು ಕೊಡಗಿನ ಮೇಲೆ ಬ್ರಿಟಿಷರು ಕಣ್ಣಿಟ್ಟಿದ್ದರು, ಕೊಡಗನ್ನು ಆಕ್ರಮಿಸಿಕೊಳ್ಳಲು ಗೌರ್ನರ್ ಜನರಲ್ ವಿಲಿಯಂ ಬೆಂಟಿಂಕ್ ಸಮ್ಮತಿಸಿದನು, ಯುದ್ಧಕ್ಕೆ ಪೂರ್ವಸಿದ್ಧತೆ ಮಾಡಿಕೊಂಡು ಬ್ರಿಟಿಷರು ತಮ್ಮ ಪ್ರತಿನಿಧಿ ಕರುಣಾಕರ ಮೆನೋನ್‌ನನ್ನು ಬಿಡುಗಡೆ ಮಾಡದಿದ್ದಲ್ಲಿ ಕೊಡಗಿನ ರಾಜನನ್ನು ಇಂಗ್ಲಿಷರ ಶತ್ರುವೆಂದು ಪರಿಗಣಿಸಲಾಗುವುದು ಎಂದು ಕಂಪನಿ ಅಂತಿಮ ಸೂಚನೆ ನೀಡಿತ್ತು. ಆದರೆ ಇದಾವುದಕ್ಕೂ ಚಿಕ್ಕ ವೀರರಾಜೇಂದ್ರ ಸೊಪ್ಪುಹಾಕಲಿಲ್ಲ. ಹಾಗಾಗಿ ೧೫.೩.೧೮೩೪ ರಲ್ಲಿ ಕಂಪನಿಯು ಒಂದು ಘೋಷಣೆ ಹೊರಡಿಸಿ ಕಂಪನಿ ಸರ್ಕಾರವು ಅವನೊಡನೆ ಮೈತ್ರಿಯನ್ನು ಕಡಿದುಕೊಂಡಿದೆ ಹಾಗೂ ಚಿಕ್ಕ ವೀರರಾಜನು ಕೊಡಗಿನ ರಾಜ ಅಲ್ಲವೆಂದು ಸಾರಿತು.

೧೮೩೪ ಏಪ್ರಿಲ್ ೪ರಂದು ವಿಲಿಯಂ ಬೆಂಟಿಕ್ ಕೊಡಗಿನ ಮೇಲೆ ಯುದ್ಧವನ್ನು ಸಾರಿದನು. ಈ ಯುದ್ಧದಲ್ಲಿ ವೀರರಾಜೇಂದ್ರ ಸೋಲ ಬೇಕಾಯಿತು. ಬ್ರಿಟಿಷ್ ಸೈನ್ಯ ರಾಜಧಾನಿ ಮಡಿಕೇರಿಯನ್ನು ವಶಪಡಿಸಿಕೊಂಡಿತು. ಅವನ ಕುಟುಂಬವನ್ನು ಬಂಧಿಸಿ ವೆಲ್ಲೂರು ನಂತರ ಅಲ್ಲಿಂದ ವಾರಣಾಸಿಗೆ ಕಳುಹಿಸಲಾಯಿತು. ಹೀಗೆ ದಕ್ಷಿಣದ ಕಾಶ್ಮೀರ ಎಂದು ಹೆಸರಾಗಿದ್ದ ಕೊಡಗು ೧೮೩೪ ಏಪ್ರಿಲ್ ೧೧ರಂದು ಬ್ರಿಟಿಷರ ವಶವಾಯಿತು.

ಬ್ರಿಟಿಷರು ಚಿಕ್ಕವೀರ ರಾಜೇಂದ್ರನನ್ನು ಪದಚ್ಯುತಗೊಳಿಸಿದ ಮೇಲೆ ಕರ್ನಲ್ ಫ್ರೇಜರ್ ಕೊಡಗಿನ ಕಮಿಷನರಾಗಿ ಬಂದನು. ಕಾಶಿ ಸೇರಿದ ಚಿಕ್ಕವೀರ ರಾಜೇಂದ್ರ ತನ್ನ ಮಗಳು ಗೌರಮ್ಮನೊಂದಿಗೆ ಲಂಡನ್ನಿಗೆ ತೆರಳಿದನು. ಮುಂದೆ ಲಂಡನ್ನಿನಲ್ಲಿ ತನ್ನ ಜೀವನವನ್ನು ಕಳೆದು ೧೮೫೯ರಲ್ಲಿ ಮರಣ ಹೊಂದಿದನು. ಅವನ ಕುಟುಂಬಸ್ಥರು ಕಾಶಿಯಲ್ಲಿ ನೆಲೆಯೂರಿದರು.



## ಬ್ರಿಟಿಷರ ವಿರುದ್ಧ ಕೊಡಗಿನ ಜನರ ಶಸ್ತ್ರಾಸ್ತ್ರ ಬಂಡಾಯ:

೧೮೩೪ ರಲ್ಲಿ ಕೊಡಗಿನ ಅರಸ ಚಿಕ್ಕವೀರರಾಜೇಂದ್ರನನ್ನು ಸೋಲಿಸಿ ಕೊಡಗು ಪ್ರದೇಶವನ್ನು ಬ್ರಿಟಿಷರು ತಮ್ಮ ವಶಕ್ಕೆ ಪಡೆದರು. ಅಲ್ಲಿಗೆ ಕೊಡಗಿನ ಹಾಲೇರಿ ವಂಶಸ್ಥರ ಆಳ್ವಿಕೆ ಕೊನೆಯಾಯಿತು. ಆದರೆ ಕೊಡಗಿನ ದೇಶಪ್ರೇಮಿಗಳು ಮತ್ತು ಸ್ವಾತಂತ್ರ್ಯ ಪ್ರಿಯರು ಸುಮ್ಮನೆ ಕೈಕಟ್ಟಿ ಕೂರಲಿಲ್ಲ. ಕೆಲವು ನಾಯಕರ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಟವನ್ನು ಆರಂಭಿಸಿದ್ದರು.

## ಸ್ವಾಮಿ ಅಪರಂಪರ:

ಇವನು ಮೂಲತಃ ತುಮಕೂರು ಜಿಲ್ಲೆಯ ಮಾಯಸಂದ್ರ ಸಮೀಪದ ಕಡಗೂರಿನ ನಿವಾಸಿ. ಇವನು ೧೮೦೭ ರಲ್ಲಿ ತನ್ನ ಹುಟ್ಟೂರನ್ನು ಬಿಟ್ಟು ೨೦ ವರ್ಷಗಳ ನಂತರ ದೊಡ್ಡ ಸನ್ಯಾಸಿಯಾಗಿ ಅಥವಾ ಜಂಗಮವಾಗಿ ಅನೇಕ ಪವಾಡಗಳನ್ನು ಮಾಡಿ ಜನರುಗಳ ಮೇಲೆ ಪ್ರಭಾವ ಬೀರಿದ್ದರು. ಜಂಗಮಸ್ವಾಮಿ ಎಂದು ಸಾಮಾನ್ಯ ಜನರನ್ನು ಆಕರ್ಷಿಸಿದನು. ಇವನು ಕೊಡಗಿನ ರಾಜನ ಕರೆಯ ಮೇರೆಗೆ ಕೊಡಗಿಗೆ ಬಂದನು. ವೀರರಾಜೇಂದ್ರನು ಅಧಿಕಾರ ಕಳೆದುಕೊಂಡಿದ್ದರಿಂದ ಮತ್ತೆ ಕೊಡಗನ್ನು ಹಾಲೇರಿ ವಂಶಸ್ಥರಿಗೆ ಮರಳಿ ದೊರಕಿಸಿಕೊಡಬೇಕೆಂದು ಸ್ವಾಮಿ ಅಪರಂಪರ ಹೋರಾಟವನ್ನು ನಡೆಸಿದನು, ಇವನು ಕೊಡಗಿನ ಸಿಂಹಾಸನಕ್ಕೆ ನೈಜ ಹಕ್ಕುದಾರರೆಂದು ಪ್ರತಿಪಾದಿಸಿದನು. ಇವನು ೧೮೩೫ ರಲ್ಲಿ ಅನೇಕ ಜಂಗಮ ಅನುಯಾಯಿಗಳೊಡನೆ ಹಾರಂಗಿಯ ಪ್ರದೇಶದಲ್ಲಿ ಉಳಿದುಕೊಂಡು ಅಲ್ಲಿಂದ ಎಡೆನಾಡು, ಹಾಲೇರಿ ೭೦೦೦ ಸೀಮೆ ಮೊದಲಾದ ಕಡೆಗಳಲ್ಲಿ ಮತ್ತಷ್ಟು ಅನುಯಾಯಿಗಳನ್ನು ಪಡೆದನು ರಹಸ್ಯವಾಗಿ ಜನರಲ್ಲಿ ದೇಶ ಅಭಿಮಾನ ಯುದ್ಧ ಉತ್ಸವಗಳನ್ನು ಉಂಟುಮಾಡಿದನು. ಕೊಡಗಿನ ಸಿಂಹಾಸನಕ್ಕೆ ತಾನೇ ಹಕ್ಕುದಾರರೆಂದು ಪ್ರತಿಪಾದಿಸಿದನು.

ಸ್ವಾಮಿ ಅಪರಂಪರ ಹಲವಾರು ನಿರೂಪಗಳನ್ನು ಹೊರಡಿಸಿ ಸುತ್ತಮುತ್ತಲ ಜನತೆ ಮುಖಂಡರುಗಳು ಮತ್ತು ಸಾಹುಕಾರರುಗಳನ್ನು ಹುರಿದುಂಬಿಸಿ ಬ್ರಿಟಿಷರ ವಿರುದ್ಧ ಸಶಸ್ತ್ರ ಆಂದೋಲನವನ್ನು ರೂಪಿಸಿದನು. ಬ್ರಿಟಿಷರ ವಿರುದ್ಧ ಕ್ರಮಗಳನ್ನು ಆರಂಭಿಸಿದನು. ಸರ್ಕಾರಿ ಖಜಾನೆಗಳನ್ನು ಲೂಟಿ ಮಾಡಿಸಿದನು

ನೂರಾರು ಆಂಗ್ಲರನ್ನು ಕೊಲ್ಲಿಸಿದನು ಆದರೆ ಬ್ರಿಟಿಷ್ ಸೈನ್ಯದ ಕ್ಯಾಪ್ಟನ್ ಲೀಹಾರ್ಡಿ ಸ್ವಾಮಿ ಅಪರಂಪರ ಚಲನವಲನಗಳ ಮೇಲೆ ನಿಗಾವಹಿಸಿ ಅವನನ್ನು ಹಿಂಬಾಲಿಸಿದನು. ಸ್ವಾಮಿ ಅಪರಂಪರನು ಮಂಜರಾಬಾದ್‌ಗೆ ಹೋಗುವ ಮಾರ್ಗಮಧ್ಯದ ಸೈನ್ಯಕ್ಕೆ ಸೆರೆಸಿಕ್ಕಿದ್ದನು. ಅವನನ್ನು ತಿರುಚಿನಾಪಳ್ಳಿಯಲ್ಲಿ ರಾಜ ಕೈದಿಯಾಗಿ ಬಂಧನದಲ್ಲಿ ಇಡಲಾಯಿತು. ೧೮೫೫ರಲ್ಲಿ ಸೆರೆಮನೆಯಿಂದ ಬಿಡುಗಡೆ ಹೊಂದಿ ಮೈಸೂರಿಗೆ ಹೋಗುವಾಗ ಶ್ರೀರಂಗಪಟ್ಟಣದಲ್ಲಿ ೧೮೭೦ರಲ್ಲಿ ಕಾಲವಾದನು.

ಸ್ವಾಮಿ ಅಪರಂಪರನ್ನು ಬಂಧಿಸುವ ಕಾರ್ಯದಲ್ಲಿ ಕೊಡಗಿನ ದಿವಾನ ಬೋಪಣ್ಣ ಪ್ರಮುಖ ಪಾತ್ರ ವಹಿಸಿದ್ದನು. ಬ್ರಿಟಿಷ್ ಸರ್ಕಾರ ಇವನ ಸೇವೆಯನ್ನು ಮನ್ನಿಸಿ ಬಂಡಾಯಗಾರರಿಂದ ವಶಪಡಿಸಿಕೊಂಡು ಸಂಪತ್ತನ್ನು ಅವನಿಗೆ ಬಹುಮಾನವಾಗಿ ನೀಡಿದರು.

## ಕಲ್ಯಾಣಸ್ವಾಮಿ:

ಸ್ವಾಮಿ ಅಪರಂಪರ ಕಣ್ಮರೆಯಾದ ಕೂಡಲೇ ಕೊಡಗಿನ ದೇಶಾಭಿಮಾನಿಗಳು ಅವನ ಸ್ಥಾನದಲ್ಲಿ ಕಲ್ಯಾಣಸ್ವಾಮಿ ಎಂಬ ಮತ್ತೊಬ್ಬ ನಾಯಕನನ್ನು ಕಂಡುಕೊಂಡರು. ಇವನು ಕೊಡಗಿನ ಸೈನ್ಯದಲ್ಲಿದ್ದು ವೀರರಾಜನ ಪ್ರೀತಿಗೆ ಪಾತ್ರರಾಗಿದ್ದರು. ಮುಂದೆ ಸ್ವಾಮಿ ಅಪರಂಪರ ಜೊತೆಗೂಡಿ ಕೆಲಸ ಮಾಡಿದನು. ಸ್ವಾತಂತ್ರ್ಯ ಪ್ರಿಯ ಹಾಗೂ ಉಜ್ವಲ ದೇಶಭಕ್ತನಾಗಿದ್ದಾನೆ, ಬ್ರಿಟಿಷರ ವಿರುದ್ಧ ಬಂಡಾಯದ ಜ್ವಾಲೆಯನ್ನು ಬೆಳೆಸಿದನು. ಎಡೆನಾಡು, ಗಡಿನಾಡು, ೭೦೦೦ ಸೀಮೆ ಮೊದಲಾದ ಕಡೆಗಳಲ್ಲಿ ಕಲ್ಯಾಣಸ್ವಾಮಿಗೆ ಅಪಾರ ಬೆಂಬಲಿಗರು ಇದ್ದರು. ಈ ಮಧ್ಯೆ ಕೊಡಗು ರಾಜರಿಗೆ ಸೇರಿದ್ದ ಅಮರಸುಳ್ಯ, ಬೆಳ್ಳಾರೆ, ಪುತ್ತೂರು, ಪ್ರದೇಶಗಳನ್ನು ಬ್ರಿಟಿಷರು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಕಲೆಕ್ಟರನ ಆಧೀನಕ್ಕೆ ಒಳಪಡಿಸಲಾಯಿತು. ಇಲ್ಲಿಯವರೆಗೂ ಕಂದಾಯವನ್ನು ರೈತರು ಧಾನ್ಯದ ರೂಪದಲ್ಲಿ ಕೊಡುತ್ತಿದ್ದರು. ಈಗ ಹಣದ ಮುಖೇನ ಪಾವತಿ ಮಾಡಬೇಕಾಗಿ ಬಂತು, ಇದರಿಂದ ಕೊಡಗಿನ ಜನತೆ ಸಿಡಿಮಿಡಿಗೊಂಡರು. ಕೊಡಗಿನಲ್ಲಿ ರಾಜನ ಅಧಿಕಾರವನ್ನು ಸ್ಥಾಪಿಸುವ ಯೋಜನೆ ಹಾಕಿದರು



## ಹುಲಿಕಡಿದ ನಂಜಯ್ಯ:

ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಈತನೊಬ್ಬ. ಇವನು ೧೮೩೭ ರಲ್ಲಿ ಕಲ್ಯಾಣಸ್ವಾಮಿಗೆ ಸ್ನೇಹಿತನಾದ. ಈ ನಂಜಯ್ಯ ಮೂಲತಹ ಹಾಸನ ಜಿಲ್ಲೆಯ ಅರಕಲಗೂಡಿನವನು ಆದರೆ ಬಹುದಿನಗಳಿಂದ ಮಡಿಕೇರಿಯಲ್ಲಿ ನೆಲೆಸಿ ಅಕ್ಕಿ ವ್ಯಾಪಾರವನ್ನು ಮಾಡುತ್ತಿದ್ದನು ಇವನು ಕಲ್ಯಾಣಿ ಸ್ವಾಮಿಯ ಸೈನ್ಯದ ನಾಯಕರಲ್ಲಿ ಒಬ್ಬನಾಗಿ ಕಾರ್ಯನಿರ್ವಹಿಸಿದರು. ಸೈನ್ಯಕ್ಕೆ ಬೇಕಾದ ಹಣದ ಸಹಾಯವನ್ನು ಇವನು ಮಾಡುತ್ತಿದ್ದನು. ಸರ್ಕಾರದ ಖಜಾನೆಯನ್ನು ಲೂಟಿ ಮಾಡಿದನು. ಬ್ರಿಟಿಷ್ ಸರ್ಕಾರ ಹುಲಿ ಕಡಿದ ನಂಜಯ್ಯನನ್ನು ಹಿಡಿದುಕೊಟ್ಟವರಿಗೆ ರೂ ೫೦೦೦ ಬಹುಮಾನವನ್ನು ಪ್ರಕಟಿಸಿತ್ತು. ಬ್ರಿಟಿಷ್ ಪ್ರಭುತ್ವವನ್ನು ತೆಗೆದು ರಾಜ ಪ್ರಭುತ್ವ ಸ್ಥಾಪನೆ ಮಾಡುವುದು ಬಂಡಾಯಗಾರರ ಉದ್ದೇಶವಾಗಿತ್ತು.

ಕಲ್ಯಾಣ ಸ್ವಾಮಿಯ ನೇತೃತ್ವದಲ್ಲಿ ಸುಮಾರು ೨೦೦೦ ಸೈನಿಕರು ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಮಂಗಳೂರನ್ನು ವಶಪಡಿಸಿಕೊಂಡರು. ಅಲ್ಲಿನ ಶಸ್ತ್ರಾಸ್ತ್ರಗಳು ಇವರ ಪಾಲಾಯಿತು. ಆದರೆ ಬ್ರಿಟಿಷರಿಗೆ ಬೊಂಬಾಯಿಯಿಂದ ಬಂದ ಸೈನಿಕರ ಸಹಾಯದಿಂದ ಬಂಡಾಯಗಾರರನ್ನು ಹಿಮ್ಮೆಟ್ಟಿಸಿದರು, ಮಡಿಕೇರಿಯಲ್ಲಿ ಬಂಡಾಯಗಾರರ ಹೋರಾಟ ಯಶಸ್ವಿಯಾಗಲಿಲ್ಲ. ಬಹುಮಂದಿ ಬ್ರಿಟಿಷರ ಪರವಾಗಿ ಕೆಲಸ ಮಾಡಿದರು. ಕಲ್ಯಾಣಸ್ವಾಮಿಯನ್ನು ಹಿಡಿದು ಕೊಟ್ಟವರಿಗೆ ೧೦,೦೦೦ ರೂಪಾಯಿಗಳ ಬಹುಮಾನವನ್ನು ಪ್ರಕಟಿಸಿತ್ತು. ೧೮೩೭ ರಲ್ಲಿ ಕಲ್ಯಾಣ ಸ್ವಾಮಿಯನ್ನು ಕ್ಯಾಪ್ಟನ್ ಹಾರ್ಡಿ ಬಂಧಿಸಿದನು. ನಂತರ ಮಂಗಳೂರಿನ ಬಿಕರ್ನಕಟ್ಟೆ ಬಳಿ ನೇಣು ಹಾಕಲಾಯಿತು.

## ಗುಡ್ಡೆ ಮನೆ ಅಪ್ಪಯ್ಯಗೌಡರು:

ಮಡಿಕೇರಿಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಗುಡ್ಡೆಮನೆ ಸುಬೇದಾರ್ ಅಪ್ಪಯ್ಯಗೌಡರು ಪ್ರಮುಖರಾಗಿದ್ದಾರೆ. ಕೊಡಗಿನ ಅರಸರಾಗಿದ್ದ ಲಿಂಗರಾಜೇಂದ್ರ ಕಾಲದಲ್ಲಿ ಜಮೇದಾರ್‌ರಾಗಿದ್ದ ಅಪ್ಪಯ್ಯಗೌಡರು ಚಿಕ್ಕವೀರರಾಜೇಂದ್ರ ಅವರ ಕಾಲದಲ್ಲಿ ಸುಬೇದಾರ್‌ರಾಗಿ ಬಡ್ತಿ ಹೊಂದಿದರು

ಪ್ರಜೆಗಳ ವಿಶ್ವಾಸಕ್ಕೆ ಪಾತ್ರನಾಗಿದ್ದ ಚಿಕ್ಕವೀರರಾಜೇಂದ್ರ ಅಂತರಂಗದಲ್ಲಿ ಬಳಗದಲ್ಲಿಗುಡ್ಡೆಮನೆ ಅಪ್ಪಯ್ಯ ಗೌಡರು ಪ್ರಮುಖ ಸ್ಥಾನವನ್ನು ಪಡೆದಿದ್ದರು. ಮುಂದೆ ಚಿಕ್ಕವೀರರಾಜೇಂದ್ರರು ಅಧಿಕಾರ ಕಳೆದುಕೊಂಡ ವಿಚಾರವನ್ನು ತಿಳಿದ ಸುಬೇದಾರ್ ಅಪ್ಪಯ್ಯ ಗೌಡರು ಕ್ಷುದ್ರರಾಗುತ್ತಾರೆ. ಅರಸರಿಗೆ ಆಪ್ತರಾಗಿದ್ದ ಪುಟ್ಟ ಬಸವರಾಜು ಹುಲಿಕೊಂದ ನಂಜಯ್ಯ ಚಟ್ಟಿ ಕುಡಿಯ ಕುರ್ತ ಕುಡಿಯ ಸೋಮಯ್ಯ, ಕೆದಂಬಾಡಿರಾಮೇಗೌಡ, ನಾಲ್ಕು ನಾಡಿನ ಹುತ್ತು ಶಾಂತಳ್ಳಿಮಲ್ಲಯ್ಯ, ಅಣ್ಣೇಗೌಡ ಮುಂತಾದವರ ಜೊತೆ ಸೇರಿ ಸಭೆ ನಡೆಸಿ ಚರ್ಚೆ ನಡೆಸುತ್ತಾರೆ ಕೊಡಗಿನ ಒಡೆಯರನ್ನು ಮತ್ತೆ ಸಿಂಹಾಸನದಲ್ಲಿ ಕುಳ್ಳಿರಿಸಬೇಕೆಂಬ ನಿರ್ಧಾರಕ್ಕೆ ಬರುತ್ತಾರೆ, ೧೮೩೭ ಮಾರ್ಚ್ ೫ ನೇ ತಾರೀಕು ಶಿವರಾತ್ರಿಯ ದಿನ ಮಡಿಕೇರಿ ಕೋಟೆಗೆ ಮುತ್ತಿಗೆ ಹಾಕುವುದೆಂದು ಚರ್ಚಿಸುತ್ತಾರೆ.

ಇದೇ ಸಮಯದಲ್ಲಿ ಆಂಗ್ಲರ ಕಂದಾಯ ನೀತಿಯಿಂದ ಬೇಸತ್ತಿದ್ದ ದಕ್ಷಿಣ ಕನ್ನಡ ಜಿಲ್ಲೆಯ ರೈತರು ಆಂಗ್ಲರ ವಿರುದ್ಧ ದಂಗೆ ಏಳಲು ಸಮಯ ಕಾಯುತ್ತಿರುತ್ತಾರೆ. ಇದರಿಂದ ಉತ್ತೇಜಿತರಾದ ಗೌಡರ ನೇತೃತ್ವದ ಕ್ರಾಂತಿಕಾರಿಗಳು ಮಾರ್ಚ್ ೫ ನೇ ತಾರೀಖಿನ ಬದಲು ಏಪ್ರಿಲ್ ಆರನೇ ತಾರೀಕು ಯುಗಾದಿಯ ದಿನದಂದು ಏಕಕಾಲದಲ್ಲಿ ಅವಿಭಜಿತ ಕೊಡಗಿನ ಅಮರ ಸುಳ್ಯದಿಂದ ಯುದ್ಧ ಪ್ರಾರಂಭಿಸುವುದು ಎಂದು ಚರ್ಚಿಸುತ್ತಾರೆ. ಕ್ರಾಂತಿಕಾರಿಗಳು ಯುದ್ಧಕ್ಕಾಗಿ ರಹಸ್ಯವಾಗಿ ಜನರನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗುತ್ತಾರೆ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುವಂತೆ ಪ್ರಚೋದಿಸುತ್ತಾರೆ. ಯುದ್ಧ ಸಿದ್ಧತೆಗಳಾಗುತ್ತವೆ. ಕೊಡಗಿನಲ್ಲಿರುವ ಕ್ರಾಂತಿಕಾರಿ ಸೈನ್ಯದ ದಂಡನಾಯಕರಾಗಿ ಗುಡ್ಡೆಮನೆ ಅಪ್ಪಯ್ಯ ಗೌಡರು ಆಯ್ಕೆಯಾಗುತ್ತಾರೆ.

ಕಲ್ಯಾಣಸ್ವಾಮಿ ನೇತೃತ್ವದ ಕ್ರಾಂತಿಕಾರಿಗಳು ಮಂಗಳೂರಿನಲ್ಲಿ ಇಂಗ್ಲಿಷರ ಮೇಲೆ ಯುದ್ಧಮಾಡಿ ಸದೆಬಡಿಯುತ್ತಾನೆ. ವಿಜಯಶಾಲಿ ಕ್ರಾಂತಿಕಾರಿಗಳು ಆಗಮಿಸುವಾಗ ಬ್ರಿಟಿಷರ ಸೈನ್ಯಕ್ಕೂ ಕಲ್ಯಾಣಸ್ವಾಮಿ ನೇತೃತ್ವದ ಕ್ರಾಂತಿಕಾರಿಗಳ ಸೈನ್ಯಕ್ಕೂ ಯುದ್ಧ ಸಂಭವಿಸುತ್ತದೆ. ವಿಷಯ ತಿಳಿದ ಅಪ್ಪಯ್ಯ ಗೌಡರು ಉಗ್ರನಾಗಿ ಸುಳ್ಯಕ್ಕೆ ಧಾವಿಸುತ್ತಾರೆ ಬ್ರಿಟಿಷ್ ಸೈನ್ಯದ ಸುಬೇದಾರ ಮಾದಯ್ಯನನ್ನು ಎದುರಿಸಿ ಬಂದಿಸಿ ಮನೆಯಲ್ಲಿಡುತ್ತಾನೆ. ಮುಂದುವರಿದ ಅಪ್ಪಯ್ಯಗೌಡರ ನೇತೃತ್ವದ ಕ್ರಾಂತಿಕಾರಿಗಳು ಇಂಗ್ಲಿಷರ ಖಜಾನೆಗಳನ್ನು ಲೂಟಿ ಹೊಡೆಯುತ್ತಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಪ್ರಜೆಗಳನ್ನು ಹುರಿದುಂಬಿಸುತ್ತಾರೆ.



ಆದರೆ ಬ್ರಿಟಿಷ್ ಸೈನ್ಯದ ದಿವಾನರಾಗಿದ್ದ ಗೋಪು, ಪೊನ್ನಪ್ಪ, ಲಕ್ಷ್ಮೀನಾರಾಯಣ ಇವರುಗಳು ಕ್ರಾಂತಿಕಾರಿಗಳನ್ನು ಹತ್ತಿಕ್ಕಲು ಮುಂದಾಗುತ್ತಾರೆ. ಸುಬೇದಾರ್ ಅಪ್ಪಯ್ಯ ಗೌಡರು ಮತ್ತು ಬ್ರಿಟಿಷ್ ಕ್ಯಾಪ್ಟನ್ ಲಿ ಹಾರ್ಡಿ ಕಡೆಯ ಸೈನ್ಯಗಳ ನಡುವೆ ಬಿಸಿಲೆ ಘಾಟ್ ಬಳಿ ಭೀಕರ ಯುದ್ಧ ನಡೆಯುತ್ತದೆ. ಯುದ್ಧದಲ್ಲಿ ಜಯಶಾಲಿಯಾದ ಅಪ್ಪಯ್ಯಗೌಡ ಹಾಗೂ ಕ್ರಾಂತಿಕಾರಿಗಳು ವಿಜಯೋತ್ಸವದಿಂದ ಗಡಿದಾಟಿ ಕೊಡಗನ್ನು ಪ್ರವೇಶಿಸುತ್ತಾರೆ. ಈ ವಿಚಾರಗಳ ಸೂಕ್ಷ್ಮತೆ ಅರಿತಿದ್ದ ಕ್ಯಾಪ್ಟನ್ ಲಿಹಾರ್ಡಿಯ ಸೇನೆ ಅಪ್ಪಯ್ಯಗೌಡರ ಕ್ರಾಂತಿಕಾರಿ ಸೇನೆಯನ್ನು ಎದುರಿಸುತ್ತದೆ ಕ್ರಾಂತಿಕಾರಿಗಳು ಜೀವದ ಹಂಗು ತೊರೆದು ಹೋರಾಡುತ್ತಾರೆ ನವನವೀನ ಮಾದರಿಯ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಬ್ರಿಟಿಷ್ ಸೈನ್ಯದ ಮುಂದೆ ಕತ್ತಿ, ದೊಣ್ಣೆ, ಕೋವಿಗಳಿಂದ ಹೋರಾಡುತ್ತಿದ್ದ ಸ್ವಾತಂತ್ರ್ಯ ಪ್ರಿಯರ ಹೋರಾಟ ಸಾಗಲಿಲ್ಲ ರಕ್ತದ ಕೋಡಿ ಹರಿಯುತ್ತದೆ ಸಾವು–ನೋವುಗಳು ಉಂಟಾಗುತ್ತವೆ ವೀರ ಸೇನಾನಿ ಅಪ್ಪಯ್ಯ ಗೌಡರು ತಪ್ಪಿಸಿಕೊಂಡು ಸುಬ್ರಹ್ಮಣ್ಯ ದತ್ತ ಪಲಾಯನ ಮಾಡಿ ಮತ್ತೆ ಹೋರಾಟಕ್ಕೆ ಯೋಧರನ್ನು ಸಂಘಟಿಸುವ ಕಾರ್ಯದಲ್ಲಿ ಮುಂದಾಗುತ್ತಾರೆ.

ಅಪ್ಪಯ್ಯಗೌಡರನ್ನು ಹೀಗೆ ಬಿಟ್ಟರೆ ತಮಗೆ ಅಪಾಯ ತಪ್ಪಿದ್ದಲ್ಲ ಎಂದು ಭಾವಿಸಿದ ಬ್ರಿಟಿಷ್ ಕ್ಯಾಪ್ಟನ್ ಲಿ ಹಾರ್ಡಿ ಅಪ್ಪಯ್ಯಗೌಡರನ್ನು ಹಿಡಿದುಕೊಟ್ಟವರಿಗೆ ೧೦,೦೦೦ ರೂಪಾಯಿಗಳು ಬಹುಮಾನವನ್ನು ಘೋಷಣೆ ಮಾಡುತ್ತಾನೆ.

ಅಪ್ಪಯ್ಯಗೌಡರು ಇತರ ಕ್ರಾಂತಿಕಾರಿ ನಾಯಕರೊಂದಿಗೆ ಚರ್ಚೆ ಮಾಡಿ ಅಳಿದುಳಿದ ಸೈನ್ಯದೊಂದಿಗೆ ಆಂಗ್ಲರ ಮೇಲೆ ಅನಿರೀಕ್ಷಿತ ದಾಳಿ ಮಾಡುತ್ತಾರೆ ಘನಘೋರ ಯುದ್ಧ ನಡೆಯುತ್ತದೆ, ತಾಯಿನಾಡು ಸ್ವತಂತ್ರವಾಗಬೇಕು ಎಂಬ ನಿರ್ಧಾರದಿಂದ ಜೀವದ ಹಂಗು ತೊರೆದು ಯುದ್ಧ ಮಾಡುತ್ತಾರೆ ಆದರೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಆಂಗ್ಲರ ಮುಂದೆ ಕ್ರಾಂತಿಕಾರಿಗಳು ಸೋತು ಹೋಗುತ್ತಾರೆ ಕ್ರಾಂತಿಕಾರಿಗಳನ್ನು ಬಂಧಿಸುತ್ತಾರೆ.

ಯುದ್ಧದಲ್ಲಿ ಬ್ರಿಟಿಷರಿಗೆ ಸೆರೆಸಿಕ್ಕಿದ ಚಟ್ಟಿ ಕುಡಿಯ, ಕುರ್ತ ಕುಡಿಯ, ಶಾಂತಳ್ಳಿ ಮಲ್ಲಯ್ಯ, ಪೆರಾಜೆಯ ಪಾರುಪತ್ತೇದಾರ ಕೃಷ್ಣಯ್ಯ ನಾಲ್ಕು ನಾಡಿನ ಉತ್ತು ಇವರುಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ಕಲ್ಲಿಕೋಟೆ ಮತ್ತು ಸಿಂಗಾಪುರಗಳಿಗೆ

ಕಳಿಸಲಾಗುತ್ತದೆ. ಇವರುಗಳ ನಾಯಕ ಕೊಡಗಿನ ವೀರಾಗ್ರಣಿ ಗುಡ್ಡೆಮನೆ ಅಪ್ಪಯ್ಯಗೌಡರನ್ನು ಕಬ್ಬಿಣದ ಸಂಕೋಲೆಗಳಿಂದ ಬಂಧಿಸಿ ಮಡಿಕೇರಿಯ ಸೆರೆಮನೆಗೆ ಹಾಕುತ್ತಾರೆ. ೧೮೩೭ ರ ಅಕ್ಟೋಬರ್ ೩೧ ಕೊಡಗಿನ ಪಾಲಿಗೆ ಅತ್ಯಂತ ದುರ್ದಿನ ಅಪ್ಪಯ್ಯಗೌಡರ ಪತ್ನಿ ಸಮೇತ (ಇವರ ಪತ್ನಿ ಮದುವಣಗಿತ್ತಿಯಂತೆ ಉಡುಪನ್ನು ತೊಡಲು ಆದೇಶಿಸಲಾಗಿತ್ತು.) ಸಾವಿರಾರು ಮಂದಿ ಕೊಡಗಿನ ಪ್ರಜೆಗಳನ್ನು ಹಾಗೂ ಅಧಿಕಾರಿಗಳನ್ನು ಮಡಿಕೇರಿ ಕೋಟೆಯ ಮುಂಭಾಗದ ರಸ್ತೆ ಇಕ್ಕೆಲಗಳಲ್ಲಿ ಸಾಲಾಗಿ ನಿಲ್ಲಿಸಿ ಅಪ್ಪಯ್ಯಗೌಡರನ್ನು ಸಂಕೋಲೆ ಸಮೇತ ಕಾಲ್ನಡಿಗೆಯಲ್ಲಿ ಕರೆದುಕೊಂಡು ಹೋಗಿ ಕೋಟೆ ಮುಂಭಾಗದ ಎತ್ತರದ ಸ್ಥಳದಲ್ಲಿ ಬೆಳಿಗ್ಗೆ ೧೦:೦೦ ಗಂಟೆ ಸಮಯದಲ್ಲಿ ಅಮಾನುಷವಾಗಿ ಗಲ್ಲಿಗೇರಿಸುತ್ತಾರೆ. ನೆರೆದಿದ್ದ ಜನಸ್ತೋಮ ಅನಾಥವಾಗಿ ಕಣ್ಣೀರು ಕರೆಯುತ್ತಾರೆ ಕೊಡಗಿನ ಸ್ವಾತಂತ್ರ್ಯ ಸಂಗ್ರಾಮ ದುರಂತ ರೀತಿಯಲ್ಲಿ ಅಂತ್ಯವಾಗುತ್ತದೆ.

## ಸ್ವಾತಂತ್ರ್ಯ ಚಳುವಳಿ:

ಕೊಡಗಿನ ಮುಖ್ಯ ಜನಾಂಗವಾದ ಕೊಡವರು ಬ್ರಿಟಿಷರಿಂದ ಅನೇಕ ಸವಲತ್ತುಗಳನ್ನು ಪಡೆದವರಾಗಿದ್ದಾರೆ. ಐರೋಪ್ಯರ ಆಡಳಿತಕ್ಕೆ ಒಳಪಟ್ಟು ಪಾಶ್ಚಾತ್ಯ ಆಡಳಿತ ಸಂಸ್ಕೃತಿಗಳಿಂದ ಪ್ರಭಾವಿತರಾಗಿದ್ದರು. ೧೮೩೭ ರಿಂದ ೧೮೫೭ ರ ಅವಧಿಯಲ್ಲಿ ಬ್ರಿಟಿಷ್ ವಿರೋಧಿ ವಾತಾವರಣದಲ್ಲಿ ಅವರು ಬ್ರಿಟಿಷರಿಗೆ ಬಹುಮಟ್ಟಿಗೆ ನಿಷ್ಠರಾಗಿದ್ದರು. ಶಿಕ್ಷಣ, ಕಾಫಿ ತೋಟ ಹಾಗೂ ಸಾರಿಗೆ ವಿಸ್ತರಣೆ ಹಾಗೂ ಸೈನ್ಯವೇ ಮುಂತಾದ ವಿವಿಧ ಸರ್ಕಾರಿ ಇಲಾಖೆಗಳ ನೌಕರಿ ಸಿಗುವ ಅವಕಾಶಗಳು ಇದ್ದವು, ಕೊಡಗಿನ ಜನರು ವಿದ್ಯಾವಂತರು, ಭಾವನೆಗಳನ್ನು ಇವರ ಸ್ವಾತಂತ್ರ್ಯ ಪ್ರೇಮದ ಜೊತೆಗೆ ಬ್ರಿಟಿಷರ ನೀತಿ ದೋರಣೆಗಳು, ಅರಣ್ಯ ಕಾನೂನುಗಳು, ೧೯೨೯ರ ಆರ್ಥಿಕ ಹಿಂಜರಿತ, ಜನಸಾಮಾನ್ಯರಿಗೆ ಬ್ರಿಟಿಷ್ ಸರ್ಕಾರದ ಮೇಲೆ ಅಪನಂಬಿಕೆ ಬೆಳೆಯುವಂತೆ ಮಾಡಿತು. ಕೊಡಗಿನಲ್ಲಿ ಕೃಷಿ ಹಿಂಜರಿತಕ್ಕೆ ಒಳಗಾಯಿತು ಜನರ ಜೀವನ ಕಷ್ಟಕರವಾಯಿತು. ರೈತರ ಸಾಲದ ಭಾರ ಅತಿಯಾಯಿತು, ಕಾಫಿ ಬೆಳೆಯ ಸಮೃದ್ಧಿಯ ಕಾಲದಲ್ಲಿ ಭೋಗಜೀವನ ನಡೆಸುವ ಅಭ್ಯಾಸಕ್ಕೆ ಒಳಗಾದರು.

ದೇಶಭಕ್ತಿಯ ಜಾಗೃತಿಯ ಆರಂಭದ ದಿನಗಳಲ್ಲಿ ಕೆಲವು ದೇಶಭಕ್ತ ತರುಣರು ಕಾಂಗ್ರೆಸ್ ಪಕ್ಷವನ್ನು ಸೇರಿದಾಗ ಕೊಡಗಿನ ಬಹುಪಾಲು ಶ್ರೀಮಂತರು,



ತೋಟಗಾರರು, ಅವರನ್ನು ಅವಹೇಳನದ ದೃಷ್ಟಿಯಿಂದ ನೋಡಿದರು. ಆದರೆ ಬ್ರಿಟಿಷರ ಆರ್ಥಿಕ ನೀತಿ ಭಾರತದ ಹಿತದ ಬಗ್ಗೆ ಹಾಗೂ ಭಾರತೀಯರ ವಿರುದ್ಧ ತೋರುತ್ತಿದ್ದ ಪಕ್ಷಪಾತ, ತಿಳುವಳಿಕೆ ಮೂಡಿದಂತೆ ಬ್ರಿಟಿಷರ ನ್ಯಾಯಪರತೆ ಬಗ್ಗೆ ಕೊಡಗಿನ ವಿದ್ಯಾವಂತರಿಗೆ ಭ್ರಮನಿರಸನವಾಯಿತು, ಹಿಂದೂ ಪತ್ರಿಕೆ, ನ್ಯೂ ಇಂಡಿಯಾ ಮುಂತಾದ ಇಂಗ್ಲಿಷ್ ಪತ್ರಿಕೆಗಳನ್ನು ಓದುತ್ತಿದ್ದಂತೆ ಈ ಅಂಶಗಳು ಅವರಿಗೆ ಸ್ಪಷ್ಟವಾದವು. ನೌಕರಿಯಲ್ಲಿ, ಸೇನೆಯಲ್ಲಿ, ಬಡ್ತಿ ಮತ್ತು ಸಂಬಳಗಳಲ್ಲಿ ತಾರತಮ್ಯವನ್ನು ಮಾಡಿದರು. ಬಾಲಗಂಗಾಧರ ತಿಲಕ್, ಮೇಡಂ ಅನಿಬೆಸೆಂಟ್, ಮಹಾತ್ಮ ಗಾಂಧಿಜೀಯವರ ವಿಚಾರಗಳು ಪತ್ರಿಕೆಗಳ ಮೂಲಕ ಜನರನ್ನು ಮುಟ್ಟಿದಾಗ ಬ್ರಿಟಿಷ್ ಆಡಳಿತದಿಂದ ಇಡೀ ದೇಶಕ್ಕೆ ಆದ ಅನ್ಯಾಯದ ಬಗ್ಗೆ ಮನವರಿಕೆಯಾಯಿತು.

## ಆರ್ಥಿಕ ಹಿಂಜರಿತ:

ಕೊಡಗಿನಲ್ಲಿ ಕಾಫಿ ತೋಟಗಳು ವಿಸ್ತರಿಸುತ್ತಿದ್ದಂತೆ ಭತ್ತದ ಬೆಳೆಯ ಕ್ಷೇತ್ರವು ಕಡಿಮೆಯಾಗುತ್ತಾ ಬಂತು. ಭತ್ತದ ವಾರ್ಷಿಕ ಸರಾಸರಿ ಬೆಲೆಯು ಹೆಚ್ಚುತ್ತಾ ಹೋಯಿತು. ಎರಡು ವರ್ಷಗಳ ಕ್ಷಾಮದ ಸ್ಥಿತಿಯ ನಂತರ ರೈತರ ಸ್ಥಿತಿ ಕಡು ಕಷ್ಟಕರವಾಯಿತು. ಕೃಷಿಯಲ್ಲಿ ದುಸ್ಥಿತಿ ಉಂಟಾಯಿತು. ರೈತರು ಕಂದಾಯ ಕೊಡಲಾರದ ಪರಿಸ್ಥಿತಿ ಉಂಟಾಯಿತು. ಕಾಫಿ ಬೆಲೆಯು ೧೮೬೫ ರಲ್ಲಿ ೫೦೦ ರೂ ಇದ್ದುದ್ದು ೧೮೮೬ ರಲ್ಲಿ ೯೦೦ ರೂಗೆ ಏರಿತು. ಮುಂದಿನ ದಿನಗಳಲ್ಲಿ ರೂ ೧೨೦೦ ರಿಂದ ೧೪೦೦ ವರೆಗೆ ಏರಿತು, ಆದರೆ ೧೯೦೪ ರಲ್ಲಿ ಕಾಫಿ ಬೆಲೆಯು ರೂ ೬೫೦ ಕ್ಕೆ ಇಳಿಯಿತು.

ಬ್ರಿಟಿಷರ ಆಡಳಿತದಿಂದ ಕೊಡಗಿಗೆ ಕೆಲವು ಕಾಲಾವಧಿಯಲ್ಲಿ ಸರ್ವತೋಮುಖ ಪ್ರಗತಿ ಮತ್ತು ಸಮೃದ್ಧಿ ಕಾಣಿಸಿಕೊಂಡಿತು. ಶೀಘ್ರವೇ ಕೃಷಿ ಮತ್ತು ವಾಣಿಜ್ಯ ಕುಸಿತಕ್ಕೆ ಒಳಗಾದವು. ಹೊಸ ಕೈಗಾರಿಕೆಗಳು ಬೆಳೆಯದೆ ಆರ್ಥಿಕ ಹಿಂಜರಿತ ಉಂಟಾಯಿತು. ೧೯೧೦ರ ವರದಿಯಂತೆ ಮಳೆಗಾಲದಲ್ಲಿ ಅನೇಕ ಕುಟುಂಬಗಳು ದಿನಕ್ಕೆ ಒಂದು ಹೊತ್ತು ಮಾತ್ರ ಊಟ ಮಾಡುತ್ತವೆ. ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲೇ ಎಷ್ಟೋ ಮನೆಗಳಲ್ಲಿ ಏನೊಂದು ಧಾನ್ಯವು ಉಳಿಯುತ್ತಿರಲಿಲ್ಲ ಎಂದು ವರದಿ ತಿಳಿಸುತ್ತದೆ.

## ಜಮೀನ್ದಾರರ ಸಂಘ:

ಇಂತಹ ಆರ್ಥಿಕ ಹಿಂಜರಿತದಿಂದ ಕಂಗಾಲಾದ ಕೃಷಿಕರು, ತೋಟಗಾರರು ೧೯೦೯ರಲ್ಲಿ ತಮ್ಮ ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಕೊಡಗು ವ್ಯವಸಾಯಗಾರರ ಸಂಘವನ್ನು ಸ್ಥಾಪಿಸಲಾಯಿತು ಇದಕ್ಕೆ ರಾವ್ ಬಹದ್ದೂರ್ ಕೋದಂಡ ಮಾದಯ್ಯ ಮತ್ತು ಬಿದ್ದಂಡ ಗಣಪತಿ ಇವರುಗಳು ಕಾರಣವೆಂದು ದಾಖಲೆಗಳು ತಿಳಿಸುತ್ತವೆ. ೧೯೧೨ರಲ್ಲಿ ಈ ಸಂಘವನ್ನು ಕೊಡಗು ಜಮೀನ್ದಾರರ ಸಂಘ ಎಂದು ಪರಿವರ್ತಿಸಲಾಯಿತು. ಕೊಡಗಿನ ರಾಷ್ಟ್ರೀಯ ಚಳುವಳಿಗೆ ಈ ಸಂಸ್ಥೆ ಬೀಜಮಾಪನವಾಯಿತು, ಕಾಫಿ ತೋಟಗಾರರ ರೈತರ ಸಮಸ್ಯೆಗಳ ಬಗ್ಗೆ ವಿವಿಧ ಠರಾವು, ಅರ್ಜಿಗಳನ್ನು ಸರ್ಕಾರಕ್ಕೆ ಕಳುಹಿಸುವುದು ಈ ಸಂಸ್ಥೆಯ ಮುಖ್ಯ ಕೆಲಸವಾಗಿತ್ತು. ಈ ಕಾಲದಲ್ಲಿ ಕೊಡಗಿನಲ್ಲಿ ನಡೆದ ಸಾಹಿತ್ಯ ಚಟುವಟಿಕೆಗಳು ರಾಜಕೀಯ ಕಾರ್ಯಕ್ರಮಗಳು ಜನರಲ್ಲಿ ಹೊಸ ಜಾಗೃತಿಯನ್ನು ಮೂಡಿಸಿದವು. ಮದ್ರಾಸು ಮಂಗಳೂರು, ಬೆಂಗಳೂರು ಮತ್ತು ಮೈಸೂರಿನ ಇಂಗ್ಲಿಷ್–ಕನ್ನಡ ದಿನ ಪತ್ರಿಕೆಗಳು ಇವರುಗಳ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರಿದವು. ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಇಲ್ಲಿನ ವಿದ್ಯಾವಂತರು ಕರ್ನಾಟಕದ ಬೇರೆ ಬೇರೆ ಸ್ಥಳಗಳಿಗೆ ಹೋಗುತ್ತಿದ್ದುದರಿಂದ ಮತ್ತು ಪಂಜೆ ಮಂಗೇಶರಾಯರಂತ ಗಣ್ಯ ಸಾಹಿತಿ ಕೊಡಗಿನ ಸರ್ಕಾರಿ ಪ್ರೌಢಶಾಲೆಗೆ ಮುಖ್ಯೋಪಾಧ್ಯಾಯರಾಗಿ ಬಂದಿದ್ದು ಇಲ್ಲಿನ ಜನರಲ್ಲಿ ವೈಚಾರಿಕ ಜಾಗೃತಿ ಹಾಗೂ ಕೊಡಗಿನ ಕರ್ನಾಟಕದ ಹಾಗೂ ಭಾರತದ ಬಗ್ಗೆ ಅಭಿಮಾನ ಬೆಳೆಯಲು ಕಾರಣವಾಯಿತು.

೧೯೧೮ರಲ್ಲಿ ಭಾರತದ ಸಂವಿಧಾನ ಸುಧಾರಣೆಯ ಬಗ್ಗೆ ತೀವ್ರ ಚರ್ಚೆಗಳು ನಡೆದಾಗ ಮಾರ್ಲೆ–ಮಿಂಟೋ ಸುಧಾರಣೆಗಳಿಂದ ೧೯೦೯ರಲ್ಲಿ ಸಾಕಷ್ಟು ಆಡಳಿತಾತ್ಮಕ ಬದಲಾವಣೆಗಳು ಆಗಿದ್ದರೂ ಕೊಡಗಿನ ಜನಕ್ಕೆ ಇದರಿಂದ ಯಾವುದೇ ಲಾಭವಾಗಲಿಲ್ಲ. ಹಾಗಾಗಿ ಕೊಡಗು ಪ್ರದೇಶವನ್ನು ಮದ್ರಾಸ್ ಪ್ರಾಂತ್ಯಕ್ಕೆ ಒಂದು ಜಿಲ್ಲೆಯಾಗಿ ವರ್ಗಾಯಿಸುವುದು ಸೂಕ್ತ ಎಂದು ಜಮೀನ್ದಾರರು ಸಂಘವು ಠರಾವು ಮಾಡಿತ್ತು.

೧೯೧೯ರಲ್ಲಿ ಮಾಂಟೆಗೋ–ಚೆಲ್ಸ್‌ಫರ್ಡ್ ಸುಧಾರಣೆಯಲ್ಲಿ ಕೊಡಗಿನಲ್ಲಿ ಒಂದು ಆಡಳಿತ ಸಲಹಾ ಸಮಿತಿ ಇರಬೇಕೆಂದು ಶಿಫಾರಸ್ಸು ಮಾಡಲಾಗಿತ್ತು.



ಆದರೆ ಶಿಫಾರಸ್ಸು ಕಾರ್ಯಾಚರಣೆಗೆ ಬರಲಿಲ್ಲ. ಜಮೀನ್ದಾರರು ಬೇಡಿಕೆಗಳನ್ನು ಪ್ರಕಟಿಸಲು ಒಂದು ಪತ್ರಿಕೆ ಇರಬೇಕೆಂದು ೧೯೨೦ರಲ್ಲಿ ಕೊಡಗು ವಾರ ಪತ್ರಿಕೆಯನ್ನು ಪ್ರಕಟಿಸಲು ಜಮೀನ್ದಾರರ ಸಂಘ ಪ್ರಮುಖ ನಿರ್ಧಾರವನ್ನು ತೆಗೆದು ಕೊಂಡಿತು. ಈ ಪತ್ರಿಕೆ ಮಡಿಕೇರಿಯಿಂದ ಪ್ರಕಾಶಿತವಾದ ಮೈಸೂರಿನಲ್ಲಿ ಮುದ್ರಿತವಾಗಿ ಪಂದ್ಯಂಡ ಬೆಳ್ಯಪ್ಪನವರು ಸಂಪಾದಕರಾಗಿ ಬಿಟ್ಟಿಯರಂಥ ಮುತ್ತಣ್ಣ ಉಪಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಮಡಿಕೇರಿಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂದೆ ಇವರು ಪ್ರಮುಖ ಪಾತ್ರ ವಹಿಸಿದರು. ಕೊಡಗಿನ ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗು ಪತ್ರಿಕೆ ಒಂದು ಮುಖವಾಣಿಯಂತೆ ಕೆಲಸ ಮಾಡಿತು. ಪತ್ರಿಕೆಯ ಉದ್ದೇಶಗಳೆಂದರೆ ದೇಶಕ್ಕೆ ಸಂಬಂಧಿಸಿದ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳನ್ನು ಚರ್ಚಿಸಿ ಜನರಿಗೆ ತಿಳುವಳಿಕೆ ಕೊಟ್ಟು ದೇಶದ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವುದು ಎಂದು ತಿಳಿಸಲಾಯಿತು. ಭಾರತದ ಬೇರೆ ಬೇರೆ ಭಾಗಗಳಲ್ಲಿ ನಡೆಯುವ ರಾಜಕೀಯ ವಿದ್ಯಮಾನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿತ್ತು.

೧೯೧೯ರ ಜಲಿಯನ್ ವಾಲಾಬಾಗ್ ದುರಂತ ಬಗ್ಗೆ ರೋಹಿಣಿ ದೇವಿ ಎಂಬುವರು ೧೯೨೨ ರಲ್ಲಿ ಲೇಖನ ಬರೆದು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಲಾಗಿ ಸಂಪಾದಕರಾಗಿದ್ದ ಬೆಳ್ಯಪ್ಪನವರನ್ನು ಕೊಡಗಿನ ಚೀಫ್ ಕಮಿಷನರ್ ತಮ್ಮ ಕಚೇರಿಗೆ ಕರೆಸಿಕೊಂಡು ಬೆದರಿಕೆಯನ್ನು ಹಾಕಿದ್ದರು. ಆದರೆ ಸಂಪಾದಕರು ಈ ಬೆದರಿಕೆಗೆ ಮಣಿಯಲಿಲ್ಲ. ಇದೇ ಸಂದರ್ಭದಲ್ಲಿ ಬಾಲಗಂಗಾಧರ ತಿಲಕ್ ಅವರ ಸ್ವರಾಜ್ಯ ನಿಧಿಗೆ ಕೊಡಗಿನಲ್ಲಿ ಹಣ ಸಂಗ್ರಹಿಸಲಾಯಿತು, ರಾಷ್ಟ್ರೀಯ ಜಾಗೃತಿಯ ಹಿನ್ನೆಲೆಯಲ್ಲಿ ೧೯೨೧ ರಲ್ಲಿ ಕೊಡಗು ಸಹಕಾರಿ ಬ್ಯಾಂಕ್ ಅಸ್ತಿತ್ವಕ್ಕೆ ಬಂತು.

## ಲೆಜಿಸ್ಲೇಟಿವ್ ಕೌನ್ಸಿಲ್:

ಕೊಡಗಿನ ಜನರ ಒತ್ತಾಯಕ್ಕೆ ಮಣಿದು ೧೯೧೯ರ ಸುಧಾರಣಾ ಕಾನೂನಿಗೆ ಒಂದು ತಿದ್ದುಪಡಿಯನ್ನು ತಂದು ೧೯೨೪ರಲ್ಲಿ ಕೊಡಗಿಗೆ ಒಂದು ಪ್ರತ್ಯೇಕ ಲೆಜಿಸ್ಲೇಟಿವ್ ಕೌನ್ಸಿಲ್ ಅನ್ನು ಬ್ರಿಟಿಷ್ ಸರ್ಕಾರವು ಕೊಡ ಮಾಡಿತ್ತು. ಇದರಲ್ಲಿ ಮತದಾನದಿಂದ ಆಯ್ಕೆಗೊಂಡ ಹದಿಮೂರು ಸದಸ್ಯರು ನಾಮಕರಣಗೊಂಡ ಇಬ್ಬರು ಸದಸ್ಯರು ಇದ್ದರು. ಆದರೆ ಈ ಲೆಜಿಸ್ಲೇಟಿವ್

ಕೌನ್ಸಿಲ್ ಕೇವಲ ಒಂದು ಸಲಹಾ ಸಮಿತಿ ಮಾತ್ರವಾಗಿತ್ತು. ಇದರ ಯಾವುದೇ ನಿರ್ಣಯವನ್ನು ತಿರಸ್ಕರಿಸುವ ಅಧಿಕಾರವು ಚೀಫ್ ಕಮೀಷನ್‌ರಿಗೆ ಇದ್ದು ವರ್ಷದಲ್ಲಿ ಸರಾಸರಿ ಆರು ದಿನ ಮಾತ್ರ ಸಭೆ ಸೇರುತ್ತಿದ್ದು ಹೆಸರಿಗೆ ಮಾತ್ರ ಇತ್ತು. ಇದರಿಂದ ಆಯ್ಕೆಗೊಂಡವರು. ಮಂತ್ರಿಗಳಾಗಲು ಅವಕಾಶ ಇರಲಿಲ್ಲ. ಇದರ ಸ್ಥಾನಮಾನಗಳನ್ನು ಸ್ವಾತಂತ್ರ್ಯಯೋಧರು ಕಟುವಾಗಿ ಟೀಕಿಸಿದ್ದಾರೆ.

೧೯೨೪ ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಮಹಾತ್ಮ ಗಾಂಧಿಜೀಯವರ ಅಧ್ಯಕ್ಷತೆಯಲ್ಲಿ ನಡೆದಾಗ ಕೊಡಗಿನಿಂದ ೩೫ ಮಂದಿ ಬೆಳಗಾವಿಗೆ ತೆರಳಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬೆಳಗಾವಿಯಿಂದ ಮರಳಿದ ಕೊಡಗಿನ ನಾಯಕರು ಅಲ್ಲಿನ ವಾತಾವರಣದಿಂದ ಸ್ಫೂರ್ತಿಗೊಂಡು ಮಡಿಕೇರಿಯಲ್ಲಿ ೨೪ ಜನವರಿ ೧೯೨೫ ರಂದು ಸಿ.ಎಸ್.ವೆಂಕಪ್ಪಯ್ಯ ನವರ ವಕೀಲರ ಕಚೇರಿಯಲ್ಲಿ ಸಭೆ ಕರೆದು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ಸ್ಥಾಪನೆಗೊಂಡು ಪಾರೂವಂಡ ಬೆಳ್ಳಿಯಪ್ಪನವರು, ಸಮಿತಿಯ ಅಧ್ಯಕ್ಷರು, ಸಿ.ಎಸ್.ವೆಂಕಪ್ಪಯ್ಯನವರು ಕಾರ್ಯದರ್ಶಿಗಳು, ಎಂ.ಎಂ.ಸಿದ್ದಿಕ್‌ರವರು ಖಜಾಂಚಿಯಾಗಿ ಆಯ್ಕೆಗೊಂಡರು, ಇದೇ ಕಾಲದಲ್ಲಿ ನೂಲುವ ಚಟುವಟಿಕೆಗಳನ್ನು, ಪ್ರೋತ್ಸಾಹಿಸಲು ೧೨೨೫ ರ ಫೆಬ್ರವರಿಯಲ್ಲಿ ಖಾದಿ ಭಂಡಾರ ಒಂದನ್ನು ತೆರೆಯಲಾಯಿತು.

ಜಮೀನುದಾರರ ಸಂಘದ ವಾರ್ಷಿಕ ಸಮ್ಮೇಳನಗಳು ಆ ಕಾಲದಲ್ಲಿ ಕುಶಾಲನಗರ, ಸೋಮವಾರಪೇಟೆ, ಅಮ್ಮತ್ತಿ, ಗೋಣಿಕೊಪ್ಪ ಮುಂತಾದ ಕಡೆ ನಡೆದಾಗ ಕಾಂಗ್ರೆಸ್ಸಿನ ನಾಯಕರಾದ ಗಂಗಾಧರರಾವ್ ದೇಶಪಾಂಡೆ, ಮದ್ರಾಸಿನ ಶ್ರೀನಿವಾಸ್ ಅಯ್ಯಂಗಾರ್, ಸತ್ಯಮೂರ್ತಿ, ಕಾರ್ನಾಡ್ ಸದಾಶಿವರಾವ್, ಆರ್.ಆರ್. ದಿವಾಕರ್, ಡಾ॥ ಎಂ.ಎಸ್ ಹರ್ಡಿಕರ್, ಶ್ರೀನಿವಾಸರಾವ್ ಕೌಜಲಗಿ ಮುಂತಾದ ನಾಯಕರು ಮಡಿಕೇರಿಗೆ ಬಂದು ಭಾಷಣಮಾಡಿದರು. ವಿದೇಶಿ ವಸ್ತುಗಳ ದಹನ ಕಾರ್ಯಕ್ರಮ ನಡೆಸಲಾಯಿತು, ಕೊಡಗಿನಲ್ಲಿ ಮುಂದೆ ಕಾಂಗ್ರೆಸ್ಸಿನ ಗಣ್ಯ ಕಾರ್ಯಕರ್ತರಾದ ಹೆಚ್.ಆರ್. ಕೃಷ್ಣಯ್ಯನವರು ತಾವು ಧರಿಸಿದ್ದ ಸರ್ಜ್‌ಸೂಟನ್ನು ಕಳಚಿ ಬೆಂಕಿಗೆ ಆಹುತಿ ಮಾಡಿ ಸ್ವಾತಂತ್ರ್ಯ



ಲಭಿಸುವವರೆಗೂ ಗಾಂಧೀಜಿಯವರ ಅನುಕರಣೆಯಲ್ಲಿ ಅಂಗಿಯನ್ನು ಧರಿಸದಿರುವ ಕುರಿತು ಪಣತೊಟ್ಟರೆಂಬ ವರ್ತಮಾನವು ತಿಳಿದುಬರುತ್ತದೆ.

ಹೆಚ್.ಆರ್. ಕೃಷ್ಣಯ್ಯನವರು ಮುಂಬಯಿಯ ವಿಲ್ಸನ್ ಕಾಲೇಜಿನಲ್ಲಿ ಓದುತ್ತಿದ್ದವರು ೧೯೨೧ ರಲ್ಲಿ ಓದು ತ್ಯಜಿಸಿ ತಮ್ಮ ಊರಿಗೆ ಬಂದು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು, ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್, ರಾಮರಾವ್ ಹುಕ್ಕೇರಿ, ಕಮಲಾದೇವಿ ಚಟ್ಟೋಪಾಧ್ಯಾಯ ಮೊದಲಾದವರು ಕೊಡಗಿಗೆ ಬಂದು ಇಲ್ಲಿನ ಅಪಾರ ಜನಸ್ತೋಮವನ್ನು ಕುರಿತು ಭಾಷಣ ಮಾಡಿದರು.

ಕಲ್ಕತ್ತದಲ್ಲಿ ೧೯೨೮ ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಕೊಡಗು ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಸಿ.ಎಸ್ ವೆಂಕಪ್ಪಯ್ಯ ಅವರು ತೆರಳಿದ್ದರು. ಜಮೀನ್ದಾರರ ಸಂಘದ ಪ್ರತಿನಿಧಿಯಾಗಿ ಪಾರುವಂಗಡ ಕುಶಾಲಪ್ಪ, ಪಂದ್ಯಂಡ ಬೆಳ್ಯಪ್ಪ, ಕೋಟೆಯ ಚಿನ್ನಪ್ಪ, ಶ್ರೀಪತಿ ರಾವ್ ಇವರುಗಳು ತೆರಳಿದ್ದರು. ಈ ಕಾಂಗ್ರೆಸ್ ಅಧಿವೇಶನದಿಂದ ಹಿಂತಿರುಗುವಾಗ ೧೧. ೧. ೧೯೨೯ ರಲ್ಲಿ ಕೊಡಗಿನ ತರುಣ ಗಣ್ಯ ಕಾಂಗ್ರೆಸ್ ಕಾರ್ಯಕರ್ತ, ಜಮೀನ್ದಾರರ ಸಂಘದ ಅಧ್ಯಕ್ಷ ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯ, ಜಿಲ್ಲಾ ಬೋರ್ಡ್ ಉಪಾಧ್ಯಕ್ಷ ಆಗಿದ್ದ ಪಾರುವಂಡ ಕುಶಾಲಪ್ಪನವರು ಮದ್ರಾಸಿನಲ್ಲಿ ಕಾಯಿಲೆಯಿಂದ ಮರಣ ಹೊಂದಿದರು, ಇವರ ಮರಣಕ್ಕೆ ಮಡಿಕೇರಿಯಲ್ಲಿ ಜಮೀನ್ದಾರರ ಸಂಘದಲ್ಲಿ ನಡೆದ ಸಂತಾಪ ಸೂಚಕ ಸಭೆಯಲ್ಲಿ ಅನೇಕರು ಭಾಷಣ ಮಾಡಿ ಕುಶಾಲಪ್ಪ ನವರ ದೇಶಸೇವೆಯ ಅಂಶಗಳನ್ನು ಗುಣಗಾನ ಮಾಡಿದರು. ಇದು ಅಲ್ಲಿ ನೆರೆದಿದ್ದ ಜನರ ಮನಸ್ಸನ್ನು ಕಲಕಿತು, ಇವರ ಹೆಸರಿನಲ್ಲಿ ಪ್ರತಿ ತಿಂಗಳ ಕೊನೆಯ ಆದಿತ್ಯವಾರ ದಿನ ಧ್ವಜ ಅಭಿನಂದನೆಯ ದಿನವೆಂದು ಆಚರಿಸಲ್ಪಟ್ಟಿತು. ಈ ಕಾರ್ಯಕ್ರಮ ಪ್ರತಿ ತಿಂಗಳು ನಡೆಯುತ್ತಿತ್ತು ಪಾಶ್ಚಾತ್ಯರ ಅನುಕರಣೆಯಿಂದ ಸದಾ ಸೂಟು–ಬೂಟು ಧರಿಸುತ್ತಿದ್ದ ಹಲವಾರು ಕೊಡಗಿನ ಜನ ಪಾಶ್ಚಾತ್ಯ ಉಡುಪನ್ನು ತ್ಯಜಿಸಿ ಖಾದಿ ಪಂಚೆ, ಜುಬ್ಬ ಧರಿಸಿ ಚಳುವಳಿಯಲ್ಲಿ ಸೇರಿದರು. ಮದ್ಯಪಾನದ ವಿರುದ್ಧ ತೀವ್ರ ಪ್ರಚಾರ ಆರಂಭಿಸಿದರು, ಕೊಡಗಿನಲ್ಲಿ ಕಾಂಗ್ರೆಸ್ ಮೂಡಿಸಿದ ಕ್ರಾಂತಿಕಾರಿ ವಾತಾವರಣ ಇದಾಗಿತ್ತು.

೧೯೨೯ ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಕರೆಯಂತೆ ಮಾರ್ಚ್ ೧೦

ರಂದು ಸ್ವರಾಜ್ಯ ದಿನವನ್ನಾಗಿ ಆಚರಿಸಲಾಯಿತು, ಈ ಕಾರ್ಯಕ್ರಮ ಕೊಡಗಿನ ಅನೇಕ ಸ್ಥಳಗಳಲ್ಲಿ ನಡೆಯಿತು, ಕೊಡಗು, ಸಾಧ್ವಿ, ಜನ್ಮಭೂಮಿ ಮುಂತಾದ ಪತ್ರಿಕೆಗಳಲ್ಲಿ ಮಹಾತ್ಮರ ವಿಚಾರಗಳನ್ನು ಪ್ರಚಾರ ಮಾಡಲಾಯಿತು, ಜಮ್ಮಡ ಮಾದಪ್ಪ, ಪಂದ್ಯಂಡ ಬೆಳ್ಳಿಯಪ್ಪ, ಕುಳ್ಳಿಮಾಡ ಕರುಂಬಯ್ಯ ಮುಂತಾದವರು ಭಾಷಣ ಮಾಡಿದರು. ವಿರಾಜಪೇಟೆ ಸಮೀಪದ ಮಗ್ಗುಲ ಗ್ರಾಮದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕೊಡಗಿನ ಅನೇಕ ಕಡೆಗಳಿಂದ ಜನರು ಸೇರಿದ್ದರು.

ಕೊಡಗಿನ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಕಾಂಗ್ರೆಸ್ಸಿನ ಧ್ವನಿ ಮುಟ್ಟಿತು. ಗಾಂಧೀಜಿ ಅವರ ಬಗ್ಗೆ ನಂಬಿಕೆ ಮೂಡಿತು. ೧೯೩೦ ರಲ್ಲಿ ಬೇಲೂರು ಕೇಶವದಾಸ ಎಂಬ ಕೀರ್ತನಕಾರರು ಮಡಿಕೇರಿಯಲ್ಲಿ ಹರಿಕಥೆ ಕಾರ್ಯಕ್ರಮಗಳನ್ನು ನಡೆಸಿ ರಾಷ್ಟ್ರೀಯ ವಿಚಾರಗಳ ಜಾಗೃತಿಗೆ ಯತ್ನಿಸಿದರು. ಈ ವಿಚಾರ ತಿಳಿದ ಬ್ರಿಟಿಷ್ ಸರ್ಕಾರ ಅವರನ್ನು ಗಡಿಪಾರು ಮಾಡಿದ್ದು ಒಂದು ಉಲ್ಲೇಖನೀಯ ಘಟನೆ, ಅವರ ಕೀರ್ತನೆಯ ವಿರುದ್ಧ ಸರ್ಕಾರ ೧೪೪ನೇ ಸೆಕ್ಷನ್ ಜಾರಿಮಾಡಿ ಕಾರ್ಯಕ್ರಮವನ್ನು ನಿಷೇಧಿಸಿತ್ತು.

**ಕಾನೂನು ಭಂಗ ಚಳುವಳಿ:**

೧೯೩೦ರಲ್ಲಿ ಗಾಂಧೀಜಿಯವರು ಉಪ್ಪಿನ 'ದಂಡಿ ಸತ್ಯಾಗ್ರಹ' ಚಳುವಳಿಗೆ ತಯಾರಿ ನಡೆಸಿದಾಗ ದೇಶದಲ್ಲೆಲ್ಲಾ ನಡೆದಂತೆ ಕೊಡಗಿನಲ್ಲೂ ವಾತಾವರಣ ಬಿಸಿಯಾಯಿತು. ಕೊಡಗಿನಲ್ಲಿ ಸೇಂದಿ ಮತ್ತು ಸಾರಾಯಿ ಮಾರಾಟದ ವಿರುದ್ಧ ಪಿಕೆಟಿಂಗ್ ಆರಂಭಿಸಲಾಯಿತು. ಮಡಿಕೇರಿಯಲ್ಲಿ ೧೯೩೦ರಲ್ಲಿ ಕೊರವಂಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಸಭೆ, ಮೆರವಣಿಗೆ ಕಾರ್ಯಕ್ರಮಗಳು ನಡೆದವು. ಪಾನ ವಿರೋಧ ಕಾರ್ಯಕ್ರಮಕ್ಕೆ ಚಾಲನೆ ಕೊಡಲಾಯಿತು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅಂಗಡಿಗಳ ಮುಂದೆ ಪ್ರದರ್ಶನ ನಡೆಸಿದರು. ಎಲ್ಲ ಊರುಗಳಲ್ಲೂ ಶಿಬಿರ ಹಾಕಿ ಪಿಕೆಟಿಂಗ್ ನಡೆಸಿದರು.

ಈ ಕಾರ್ಯಕ್ರಮಗಳಿಂದಾಗಿ ಕೊಡಗಿನಲ್ಲಿ ಸೇಂದಿ ಮಾರಾಟ ಮತ್ತು ಸರಾಯಿ ಮಾರಾಟಗಳ ಪ್ರಮಾಣ ತೀವ್ರ ಕುಸಿಯಿತು. ಕೆಲವು ಸೇಂದಿ ಮತ್ತು



ಸಾರಾಯಿ ಅಂಗಡಿಗಳನ್ನು ಗುತ್ತಿಗೆ ಹಿಡಿದವರು ಹಣ ಕೊಡಲಾರದೆ ಅಂಗಡಿಯನ್ನು ಮುಚ್ಚಿದರು ಮುಂದೆ ಸರ್ಕಾರ ಹರಾಜು ಮಾಡಲು ಪ್ರಯತ್ನಿಸಿದಾಗ ಹರಾಜಿನಲ್ಲಿ ಯಾರು ಭಾಗವಹಿಸಲಿಲ್ಲ.

ಸೇಂದಿ ಮತ್ತು ಸರಾಯಿ ಮಾರಾಟದ ವಿರುದ್ಧ ಬಾರಿ ಪ್ರತಿಭಟನೆಗಳು ನಡೆದವು, ಸಾರಾಯಿ ಅಂಗಡಿಗಳ ಮಾಲೀಕರ ವಿರುದ್ಧ ಉಗ್ರ ಪ್ರತಿಭಟನೆಗಳು ನಡೆದವು. ಪೊಲೀಸರ ಬೆದರಿಕೆಗೂ ಜಗ್ಗದೆ ಅಹಿಂಸಾತ್ಮಕವಾಗಿ ಕಾನೂನು ಭಂಗ ಚಳುವಳಿಗಳು ನಡೆದವು. ಈ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಪಂದ್ಯಂಡ ಬೆಳ್ಯಪ್ಪ ಕರುಂಬಯ್ಯ ಅಬ್ದುಲ್‌ಗಫಾರ್‌ಖಾನ್, ಕೃಷ್ಣಯ್ಯ ಮೊದಲಾದವರನ್ನು ಬಂಧಿಸಲಾಯಿತು, ಇವರ ಬಂಧನವನ್ನು ಪ್ರತಿಭಟಿಸಿ ಮಡಿಕೇರಿಯಲ್ಲಿ ಹರತಾಳ ಮಾಡಿದರು, ಶಾಲಾ ವಿದ್ಯಾರ್ಥಿಗಳು ಈ ಸಭೆಯಲ್ಲಿ ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡರು. ಬಂಧಿತರಿಗೆ ೬ ತಿಂಗಳ ಶಿಕ್ಷೆಯಾಯಿತು, ಆದರೆ ಇಂಥ ಬಂಧನಗಳಿಂದ ಚಳುವಳಿಗಳು ಕಡಿಮೆಯಾಗಲಿಲ್ಲ, ಈ ವಿಚಾರಗಳನ್ನು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿದ್ದರಿಂದ ೧ ಸಾವಿರ ರೂಪಾಯಿಗಳ ಭದ್ರತಾ ಠೇವಣಿ ನೀಡಬೇಕೆಂದು ಅಜ್ಞೆಯನ್ನು ಹೊರಡಿಸಿದನು. ಇದರ ವಿರುದ್ಧವೂ ಪ್ರತಿಭಟನೆಗಳು ನಡೆದವು. ಈ ಪ್ರತಿಭಟನೆಗಳಿಂದಾಗಿ ಮುಂದೆ ಕಮೀಷನರ್ ತನ್ನ ಈ ವಿಶೇಷ ಅಜ್ಞೆಯನ್ನು ಹಿಂತೆಗೆದು ಕೊಳ್ಳಬೇಕಾಯಿತು.

೧೯೩೦ರಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಿ ಸಾವಿರಾರು ಜನರು ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಜೈಲು ಕಂಡ ಪ್ರಸಂಗದಿಂದಾಗಿ ಈ ವರ್ಷ ಹುತ್ತರಿ ಹಬ್ಬವನ್ನು ಆಚರಿಸಬಾರದು ಎಂಬುದಾಗಿ ಜಿಲ್ಲೆಯ ಕಾಂಗ್ರೆಸ್ ಮನವಿ ಮಾಡಿಕೊಂಡಿತ್ತು.

ಹಬ್ಬದ ದಿನ ಹೊಸ ಬೆಳೆಯ ಕದಿರು ಕೊಯ್ಯಬಹುದು ಹಬ್ಬದಲ್ಲಿ ನಾಡಕೋಲು ಅಥವಾ ಕೋಲಾಟ ನಡೆಸುವುದರ ಬದಲು ಖಾದಿ ಬಟ್ಟೆ ತೊಟ್ಟು ರಾಷ್ಟ್ರಧ್ವಜ ಏರಿಸಿ ಧ್ವಜವಂದನೆ ಮಾಡಬೇಕೆಂದು ವಿನಂತಿಸಿ ಕೊಳ್ಳಲಾಯಿತು.

ಮಡಿಕೇರಿ ಸಮೀಪದ ಮದೆನಾಡು ಗ್ರಾಮದಲ್ಲಿ ಕೋಲಾಟ ನಡೆಸದೆ ಸುಮಾರು ೫೦೦ ಜನ ಸಭೆ ನಡೆಸಿ ಚಳುವಳಿಗೆ ತಮ್ಮ ಬೆಂಬಲ ನೀಡಿದರು. ಬೇತು ಗ್ರಾಮದಲ್ಲಿ ನೂರು ಜನ ಖಾದಿ ಬಟ್ಟೆ ತೊಟ್ಟು ರಾಷ್ಟ್ರ ಧ್ವಜ ಹಾರಿಸಿದರು.

ತಾವಳಗೆರೆಯಲ್ಲಿ ಒಂದು ಸಾವಿರ ಜನರನ್ನು ಉದ್ದೇಶಿಸಿ ಭಾಷಣ ಮಾಡಲಾಯಿತು. ನಂತರ ಧ್ವಜಾರೋಹಣ ಮಾಡಲಾಯಿತು. ಕೊಡಗಿನ ಬಹುತೇಕ ಕಡೆ ಹುತ್ತರಿ ಹಬ್ಬವನ್ನು ಆಚರಿಸದೆ, ಕೋಲಾಟಗಳನ್ನು ಆಡದೆ ಸ್ವಾತಂತ್ರ್ಯ ಚಳುವಳಿಗೆ ಬೆಂಬಲ ವ್ಯಕ್ತಪಡಿಸಿದರು, ಕಾಂಗ್ರೆಸ್ ಧ್ವಜವನ್ನು ಹಾರಿಸಲಾಯಿತು, ಮದ್ಯ ಮಾರಾಟವು ಸಂಪೂರ್ಣ ಕಡಿಮೆಯಾಯಿತು. ವಿದೇಶಿ ಬಟ್ಟೆ ಮಾರುವ ಅಂಗಡಿಗಳ ಎದುರು ಮಡಿಕೇರಿ ಮತ್ತು ವಿರಾಜಪೇಟೆಗಳಲ್ಲಿ ಕಾಂಗ್ರೆಸ್ ಸ್ವಯಂಸೇವಕರು ಮಹಿಳೆಯರು ಪಿಕೆಟಿಂಗ್ ನಡೆಸಿದರು. ವಿದೇಶಿ ಬಟ್ಟೆಗಳನ್ನು ಮಾರುವ ಅಂಗಡಿಯವರು ವಿದೇಶಿ ಬಟ್ಟೆಗಳ ಬದಲಿಗೆ ಖಾದಿ ಬಟ್ಟೆಗಳನ್ನು ಮಾರಲು ಪ್ರಾರಂಭಿಸಿದರು.

## ಮಡಿಕೇರಿ ಕೋಟೆಯ ಮೇಲೆ ತ್ರಿವರ್ಣಧ್ವಜದ ಹಾರಾಟ:

ಮಡಿಕೇರಿಗೆ ಮಂಗಳೂರಿನಿಂದ ಆಗಮಿಸಿದ ಕಾಂಗ್ರೆಸ್ ಕಾರ್ಯಕರ್ತ ರಂಗರಾವ್ ತಲಚೇರಿಯನ್ ಅವರು ನಡೆಸಿದ ಪ್ರಚಾರ ಮಡಿಕೇರಿಯ ಯುವಕರನ್ನು ಹುರಿದುಂಬಿಸಿತು. ದಿನಾಂಕ ೧೬.೧೨.೧೯೩೦ ರಂದು ಮಡಿಕೇರಿಯಲ್ಲಿನ ಕೋಟೆಯ ಮೇಲಿದ್ದ ಬ್ರಿಟಿಷರ ರಾಷ್ಟ್ರಧ್ವಜವಾಗಿದ್ದ ಯೂನಿಯನ್ ಜಾಕ್‌ಅನ್ನು ಕೆಳಗೆ ಇಳಿಸಿ ಅಲ್ಲಿ ತ್ರಿವರ್ಣಧ್ವಜವನ್ನು ಹಾರಿಸಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಬ್ಬರನ್ನು ಬಂಧಿಸಿದ್ದರು. ಹಳ್ಳಿಹಳ್ಳಿಗಳಲ್ಲಿ ಸ್ವಾತಂತ್ರ್ಯದ ಪ್ರಚಾರವನ್ನು ಮಾಡಲಾಯಿತು. ಅನೇಕ ಕಡೆ ಬಂಧನದ ವಿರುದ್ಧ ಪ್ರತಿಭಟನಾ ಸಭೆಗಳು ನಡೆದವು.

೧೯೩೧ ಫೆಬ್ರುವರಿ ೨೧ ರಂದು ಮಡಿಕೇರಿಯಲ್ಲಿ ನಡೆದ ಮದ್ಯದಂಗಡಿಗಳ ಹರಾಜನ್ನು ಪ್ರತಿಭಟಿಸಲು ಭಾರಿ ಜನ ಸೇರಿದ್ದರು. ನಾಲ್ವರು ಮಹಿಳೆಯರು ಸೇರಿದಂತೆ ೬೧ ಜನರನ್ನು ಬಂಧಿಸಿದ್ದರು. ಆದರೆ ಸಂಜೆ ಇವರನೆಲ್ಲಾ ಬಿಡುಗಡೆ ಮಾಡಲಾಯಿತು. ಗಾಂಧಿ–ಇರ್ವಿನ್ ಒಪ್ಪಂದ ಆಗುವವರೆಗೆ ಕೊಡಗಿನಾದ್ಯಂತ ಹೋರಾಟ ನಿರಂತರವಾಗಿ ಸಾಗಿತ್ತು.

ಗಾಂಧಿ–ಇರ್ವಿನ್ ಒಪ್ಪಂದದ ನಂತರ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ ಪ್ರಕಟಿಸಿದ ವರದಿಯಲ್ಲಿ ಕರ್ನಾಟಕದಲ್ಲಿ ಸತ್ಯಾಗ್ರಹದ ವರದಿ ಎಂಬ ಕಿರುಹೊತ್ತಿಗೆಯನ್ನು ತರಲಾಯಿತು. ಅವರು ೧೯೩೧ ರಲ್ಲಿ ನಡೆದ ಮದ್ಯದ



ಹರಾಜಿನಲ್ಲಿ ಸರ್ಕಾರಕ್ಕೆ ೩೩ ಸಾವಿರ ರೂಪಾಯಿಗಳ ಬದಲಿಗೆ ಕೇವಲ ೧೨ ಸಾವಿರ ರೂಪಾಯಿಗಳು ಮಾತ್ರ ಗುತ್ತಿಗೆ ದೊರೆಯಿತು. ಇದರಿಂದ ಕ್ರೋಧಗೊಂಡ ಬ್ರಿಟಿಷ್ ಸರ್ಕಾರ ಮಧ್ಯದ ವಿರೋಧಿ ಹೋರಾಟಗಾರರನ್ನು ಅನೇಕ ತಿಂಗಳುಗಳ ಕಾಲ ಬಂಧಿಸಿ ಸೆರೆಮನೆಗೆ ತಳ್ಳಿತು.

ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷರಿಂದ ಎಷ್ಟೇ ಶಿಕ್ಷೆಗಳಿಗೆ ಗುರಿಯಾದರೂ ಯಾವುದೇ ನಿರುತ್ಸಾಹಕ್ಕೆ ಒಳಪಡಲಿಲ್ಲ. ಮಡಿಕೇರಿ ಜೈಲಿನಲ್ಲಿ ಮತ್ತು ಕಣ್ಣಾನೂರಿನ ಜೈಲಿನಲ್ಲಿ ಶಿಕ್ಷೆ ಅನುಭವಿಸಿ ಬಂದ ಹೆಚ್.ಆರ್.ಕೃಷ್ಣಯ್ಯನವರು ಹೇಳುವಂತೆ ಬಿಡುಗಡೆಯ ನಂತರ ಮತ್ತೆ ಯಥಾವತ್ ಕೆಲಸವನ್ನು ಆರಂಭಿಸಿದೆವು ಎಂದಿದ್ದಾರೆ. ಗಾಂಧಿ–ಇರ್ವಿನ್ ಒಪ್ಪಂದ ಆದಾಗ ಮಡಿಕೇರಿಯ ಜೈಲಿನಲ್ಲಿ ಇದ್ದವರನ್ನು ಬಿಡುಗಡೆ ಮಾಡಲು ಅಂದು ಮಡಿಕೇರಿಯಲ್ಲಿ ಸಂತೆ ದಿನವಾಗಿದ್ದು ಜೈಲಿನಿಂದ ಹೊರಬಂದ ನಮಗೆ ಭವ್ಯ ಸ್ವಾಗತ ದೊರೆಯಿತು. ವಿಶೇಷವೆಂದರೆ ಅಂದಿನ ತನಕವೂ ಈ ಸ್ವಾತಂತ್ರ್ಯ ಚಳುವಳಿಯ ವಿರೋಧಿಗಳಾಗಿದ್ದ ಅನೇಕರು ಅಂದು ಬಿಳಿ ಟೋಪಿಯನ್ನು ಧರಿಸಿಕೊಂಡು ಕಾಂಗ್ರೆಸ್ಸಿನ ಬಾವುಟ ಹಿಡಿದುಕೊಂಡು ಸ್ವಾಗತ ಮೆರವಣಿಗೆಯಲ್ಲಿ ಹಾಜರಿದ್ದರು.

೧೯೩೧ ರಲ್ಲಿ ಕರಾಚಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕೊಡಗಿನಿಂದ ಪಂದ್ಯಂಡ ಬೆಳ್ಳಿಯಪ್ಪ ಮತ್ತು ಕರುಂಬಯ್ಯನವರು ಪ್ರತಿನಿಧಿಗಳಾಗಿ ಹೋಗಿದ್ದರು ಆ ವರ್ಷ ಏಪ್ರಿಲ್‌ನಲ್ಲಿ ನಡೆದ ಜಮೀನ್ದಾರರ ಸಮ್ಮೇಳನಕ್ಕೆ ಬಂಗಾಳದ ಸೇನ್‌ಗುಪ್ತ ಹಾಗೂ ಆಂಧ್ರದ ಟಿ. ಪ್ರಕಾಶಂ ಹಾಜರಿದ್ದರು, ೧೯೩೧ರ ಮಾರ್ಚ್‌ನಿಂದ ಡಿಸೆಂಬರ್‌ವರೆಗೆ ಕಾನೂನು ಭಂಗ ಚಳುವಳಿ ಸ್ಥಗಿತವಾಗಿತ್ತು. ಗಾಂಧೀಜಿ ದುಂಡುಮೇಜಿನ ಸಮ್ಮೇಳನಕ್ಕೆ ಲಂಡನ್ನಿಗೆ ತೆರಳಿ ಬರಿಗೈಯಲ್ಲಿ ಮರಳಿ ಬಂದಾಕ್ಷಣ ೧೯೩೨ರ ಜನವರಿಯಲ್ಲಿ ಮತ್ತೆ ರಾಷ್ಟ್ರೀಯ ಚಳುವಳಿಗಳು ಪ್ರಾರಂಭವಾದವು. ಆದರೆ ಶಾಂತಿ ಕಾಲದಲ್ಲಿ ಕೊಡಗಿನಲ್ಲಿ ಹಳ್ಳಿ ಹಳ್ಳಿಗಳಲ್ಲಿ ಖಾದಿ ಪ್ರಚಾರ, ರಾಷ್ಟ್ರೀಯ ವಿಚಾರಗಳ ಪ್ರಚಾರ ಮುಂತಾದ ಚಟುವಟಿಕೆಗಳು ನಿರಂತರವಾಗಿ ನಡೆದಿದ್ದವು. ಸೇವಾದಳದ ಕಾರ್ಯಕರ್ತರಾಗಿ ಹುಬ್ಬಳ್ಳಿಯಲ್ಲಿ ಇರುತ್ತಿದ್ದ ವಿರಾಜಪೇಟೆಯ ಎಂ.ಸಿ.ಮಾತಂಡ ಅವರು ಕೊಡಗಿನಲ್ಲಿ ಸೇವಾದಳದ ತರಬೇತಿ ಚಟುವಟಿಕೆಗಳನ್ನು ನಡೆಸಿದರು. ಅನೇಕ ಕಡೆಗಳಲ್ಲಿ ಶಿಬಿರಗಳು ನಡೆದವು. ೧೯೩೧ರಲಿ ಮೈಸೂರಿನಲ್ಲಿ ನಡೆದ, ಸೇವಾದಳದ

ಶಿಬಿರಕ್ಕೆ ಕೊಡಗಿನಿಂದ ನಾಲ್ವರು ತರುಣರು ತೆರಳಿ ತರಬೇತಿ ಪಡೆದು ಅಲ್ಲಿಗೆ ಆಗಮಿಸಿದ್ದ ಪಂಡಿತ್ ಜವಾಹರ್‌ಲಾಲ್ ನೆಹರುರವರಿಂದ ಪ್ರಶಸ್ತಿ ಪಡೆದರು.

೧೯೩೨ ರ ಜನವರಿಯಲ್ಲಿ ಕೊಡಗಿನ ಕಮಿಷನರ್ ಒಂದು ಆದೇಶದ ಮೂಲಕ ೧೪೪ ಸೆಕ್ಷನ್ ಜಾರಿ ಮಾಡಿ ಪ್ರತಿಬಂಧಕಾಜ್ಞೆಯನ್ನು ಜಾರಿಗೆ ತಂದನು, ಅದರ ಪ್ರಕಾರ ಕೊಡಗಿನ ನಾಯಕರುಗಳು ಕೊಡಗಿನ ಯಾವ ಭಾಗದಲ್ಲಿಯೂ ಭಾಷಣ ಮಾಡಬಾರದಾಗಿ ಪ್ರತಿಬಂಧನ ಹೇರಿದನು. ಈ ಆದೇಶದ ವಿರುದ್ಧವಾಗಿ ಹಲವು ನಾಯಕರು ಭಾಷಣವನ್ನು ಮಾಡಿದರು, ಅವರುಗಳನ್ನು ಬಂಧನಕ್ಕೆ ಒಳಪಡಿಸಲಾಯಿತು. ಮಡಿಕೇರಿ, ಸೋಮವಾರ ಪೇಟೆ, ಸುಂಟಿಕೊಪ್ಪ, ಮೂರ್ನಾಡು ಮೊದಲಾದ ಕಡೆಗಳಿಗೆ ಸ್ವಯಂಸೇವಕರನ್ನು ಕಳುಹಿಸಿ ಆಯಾ ಊರುಗಳಲ್ಲಿ ಸತ್ಯಾಗ್ರಹ ಶಿಬಿರಗಳನ್ನು ಆರಂಭಿಸಿದರು.

ಸಿದ್ದಾಪುರ ಶಿಬಿರದಲ್ಲಿ, ಪಿಕೆಟಿಂಗ್ ನಡೆಸಿ ಧ್ವಜವಂದನೆ, ಬುಲೆಟಿನ್ ಹಂಚುವಿಕೆ, ಪ್ರಭಾತ್ ಬೇರಿ ಮಾಡಿದರು, ಶೇಂದಿ ಅಂಗಡಿ ಮುಂದೆ ಪಿಕೆಟಿಂಗ್ ಮಾಡುವಾಗ ಅಂಗಡಿಗಳ ಮಾಲೀಕರು ಸತ್ಯಾಗ್ರಹಿಗಳಿಗೆ ತೀರಾ ಹಿಂಸೆ ಮಾಡಿದರು, ಬೈಗಳ, ಹೊಡೆತ, ಮದ್ಯದ ಅಭಿಷೇಕ, ಉಗಿಯುವುದು ಎಲ್ಲಾ ಆಗುತ್ತಿತ್ತು.

೧೯೩೨ರ ಸತ್ಯಾಗ್ರಹದಲ್ಲಿ ಬ್ರಿಟಿಷ್ ಕರ್ನಾಟಕದಲ್ಲಿ ಒಟ್ಟು ೨೩೭೫ ಮಂದಿ ಶಿಕ್ಷೆಗೆ ಒಳಗಾಗಿದ್ದರು, ಇದರಲ್ಲಿ ಕೊಡಗಿನವರು ೧೦೦ ಜನರಿದ್ದರು, ಜೈಲಿನಿಂದ ಬಿಡುಗಡೆಯಾಗಿ ಬಂದವರು ಮತ್ತೆ ಮತ್ತೆ ಸತ್ಯಾಗ್ರಹದಲ್ಲಿ ಸೇರ್ಪಡೆಯಾಗುತ್ತಿದ್ದುದು ವಿಶೇಷವಾಗಿತ್ತು.

ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣಾ ಚಟುವಟಿಕೆಗೆ ಕೊಟ್ಟ ಕರೆಯ ಮೇರೆಗೆ ಕೊಡಗಿನಲ್ಲಿ ದೇವಸ್ಥಾನಗಳನ್ನು ಹರಿಜನರಿಗೆ ತೆರೆಸುವ ಚಳುವಳಿ ಪ್ರಾರಂಭವಾಯಿತು. ಅನೇಕ ಕಡೆ ಸಾಮೂಹಿಕ ಭೋಜನ ಏರ್ಪಡಿಸಲಾಯಿತು. ಅಸ್ಪೃಶ್ಯತೆಯನ್ನು ಪಾಲಿಸಬಾರದೆಂಬ ನೀತಿಯನ್ನು ಕಾಂಗ್ರೆಸ್ ಕಾರ್ಯಕರ್ತರು ಹಳ್ಳಿ ಹಳ್ಳಿಗಳಲ್ಲಿ ಸಭೆ ನಡೆಸಿ ಕೊಡಗಿನಾದ್ಯಂತ ಪ್ರಚಾರ ಮಾಡಿದರು, ಕೆಲವು ಕಡೆ ಪರಿಶಿಷ್ಟ ಜಾತಿಯವರ ಜೊತೆ ಚಹಾ ಪಾನಿಯಗಳ ಕೂಟ ನಡೆದವು.



ಚೆನ್ನಯ್ಯನಕೋಟೆಯಲ್ಲಿರುವ ಕೆಂಡದ ಬಸವೇಶ್ವರ ದೇವಾಲಯಕ್ಕೆ ಅಸ್ಪೃಶ್ಯರನ್ನು ಕರೆದೊಯ್ಯಲಾಯಿತು. ೨೫.೧೦.೧೯೩೨ ರಂದು ಮಡಿಕೇರಿ ಕೋಟೆಯ ಮೇಲೆ ಇನ್ನೊಮ್ಮೆ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು. ನಂತರ ಶಿಕ್ಷೆಗೊಳಗಾಗಿ, ದಂಡ ಪಾವತಿ ಮಾಡಬೇಕಾಯಿತು. ಸತ್ಯಾಗ್ರಹಿಗಳ ಮನೆಯ ವಸ್ತುಗಳನ್ನು, ಹಸುಗಳನ್ನು, ಕೋಣಗಳನ್ನು, ಪೊಲೀಸರು ಜಪ್ತಿ ಮಾಡಿದರು, ಮುಂದೆ ಇವುಗಳನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಯಿತು.

ರಾಜಕೀಯ ಬಂಧನಗಳನ್ನು ಪ್ರತಿಭಟಿಸಿ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಹತ್ತು–ಹನ್ನೆರಡು ದಿನಗಳ ಕಾಲ ಮುಷ್ಕರಗಳನ್ನು ಸಂಘಟಿಸಿ ಸಿ.ಬಿ.ಮೊಣ್ಣಯ್ಯ, ಪೂಜಾರಿ ರಾಮಪ್ಪ, ನಾರಾಯಣರಾವ್ ಮುಂತಾದವರು ಶಾಲೆಯಿಂದ ಹೊರದೂಡಲ್ಪಟ್ಟರು. ೧.೧೧.೧೯೩೩ರಂದು ಪಂದ್ಯಂಡ ಬೆಳ್ಳಿಯಪ್ಪ, ಪುಲಿಯಂಡ ಸುಬ್ಬಯ್ಯ, ಎಚ್. ಬಿ ತಮ್ಮಯ್ಯ ಇವರುಗಳು ಸಾರ್ವಜನಿಕ ಸಭೆಗಳನ್ನು ಸಂಘಟಿಸಿ ಮಡಿಕೇರಿಯಲ್ಲಿ ಬಂಧನಕ್ಕೊಳಗಾದರು, ಜನವರಿ ೨೬ ರಂದು ಸತ್ಯಾಗ್ರಹ ನಡೆಸಿ ಏಳು ಮಂದಿ ಪರಿಶಿಷ್ಟರು ಕೂಡ ಬಂಧನಕ್ಕೆ ಒಳಗಾದರು ಅವರನ್ನು ಬಂಧಿಸಲಾಯಿತು. ಅದೇ ದಿನ ರಾತ್ರಿ ಮಡಿಕೇರಿಯಲ್ಲಿ ಗೋಪಾಲದಾಸರು ಹರಿಕಥೆ ಕಾರ್ಯಕ್ರಮವನ್ನು ನಡೆಸಲು ಅವರನ್ನು ಎಚ್.ಆರ್. ಕೃಷ್ಣಯ್ಯ ಅದೇ ದಿನ ವಿರಾಜಪೇಟೆಯಲ್ಲಿ ಸ್ವಾತಂತ್ರ್ಯ ದಿನ ಆಚರಣೆಗೆ ಸಂಬಂಧಿಸಿ ಬಲ್ಯತಂಡ ಮುದ್ದಮ್ಮ ಮತ್ತು ಇಬ್ಬರು ಮಹಿಳೆಯರು ಸೇರಿದಂತೆ ಆರು ಜನರನ್ನು ಬಂಧಿಸಿದರು.

### ಕೊಡಗಿನಲ್ಲಿ ಗಾಂಧೀಜಿಯವರ ಪ್ರವಾಸ:

೧೯೩೨ರಲ್ಲಿ ಮಡಿಕೇರಿಯಲ್ಲಿ ಡಿ.ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ 'ಕನ್ನಡ ಸಾಹಿತ್ಯ ಸಮ್ಮೇಳನ' ನಡೆದದ್ದು ಹಾಗೂ ೧೯೩೩ರಲ್ಲಿ ಮಡಿಕೇರಿಯಲ್ಲಿ 'ಕರ್ನಾಟಕ ಸಂಘ' ಸ್ಥಾಪನೆಯಾದದ್ದು ಕೊಡಗಿನ ಇತಿಹಾಸದಲ್ಲಿ ಬಹಳ ಪ್ರಮುಖವಾದ ಘಟನೆಗಳು, ೧೯೩೪ ರ ಫೆಬ್ರುವರಿ ೨೧, ೨೨ ಮತ್ತು ೨೩ ರಂದು ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಿಸಿದಂತೆ ಕೊಡಗಿನಲ್ಲಿ ಪ್ರವಾಸ ಕೈಗೊಳ್ಳಲು ಗಾಂಧೀಜಿಯವರು ಬಂದರು, ಗುಂಡುಕುಟ್ಟಿ ಮಂಜುನಾಥಯ್ಯ ನವರು ತಮಿಳುನಾಡಿನ ಕೂನೂರಿನಿಂದ ಬಂದ ಗಾಂಧೀಜಿಯವರನ್ನು ತಮ್ಮ ವಾಹನದಲ್ಲಿ ಕರೆತಂದರು, ಕೈಕೇರಿಯ ಅಸ್ಪೃಶ್ಯರ ಕೇರಿಗೆ ಮೊದಲು ಭೇಟಿ

ಇತ್ತ ಗಾಂಧೀಜಿ ಅಲ್ಲಿನ ಸ್ವಚ್ಛತೆ ಅಚ್ಚುಕಟ್ಟುಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದರು, ಅಲ್ಲಿ ಅನೇಕ ಸವರ್ಣೀಯ ಸ್ತ್ರೀಯರು ಬಂದು ಹರಿಜನ ನಿಧಿಗೆ ತಮ್ಮ ಬಂಗಾರದ ಒಡವೆಗಳನ್ನು ದಾನ ಕೊಟ್ಟರು, ಮಡಿಕೇರಿಯಲ್ಲಿ ಕೊಡಗಿನ ಗಾಂಧಿ ಪಂದ್ಯಂಡ ಬೆಳ್ಯಪ್ಪನವರ ಮುಂದಾಳತ್ವದಲ್ಲಿ ಬಾರಿ ಸಭೆ ನಡೆಯಿತು, ಗಾಂಧೀಜಿಯವರು ಕೊಡಗಿನ ತಮ್ಮ ಭೇಟಿಯ ಬಗ್ಗೆ ಹೇಳುತ್ತಾ ಇಲ್ಲಿಗೆ ಬಂದಾಗಿನಿಂದ ಈ ಸ್ಥಳದ ನೈಸರ್ಗಿಕ ರಮಣೀಯತೆಯನ್ನು ಸವಿಯುತ್ತಿದ್ದೇನೆ, ನಿಮ್ಮ ಈ ಸ್ಥಳದ ಪ್ರಕೃತಿಯ ದೃಶ್ಯಗಳು ಎಷ್ಟು ಚೆನ್ನಾಗಿದೆಯೊ ಅಷ್ಟೇ ನಿಮ್ಮ ಹೃದಯಗಳು ಚೆಲುವಾಗಿವೆ. ಹರಿಜನರಿಗೆ ದೇವಾಲಯ ಪ್ರವೇಶ ನೀಡಿ ನಿಮ್ಮ ಹೃದಯ ಶ್ರೀಮಂತಿಕೆಯನ್ನು ಮೆರೆದಿದ್ದೀರಿ ಎಂದಿದ್ದಾರೆ. ಪ್ರಕೃತಿಯಿಂದ ಪಾಠ ಕಲಿತಿದ್ದೀರಿ ಎಂದು ಗಾಂಧೀಜಿ ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು, ಅಂದು ರಾತ್ರಿ ಪೊನ್ನಂಪೇಟೆಯ ರಾಮಕೃಷ್ಣಾಶ್ರಮದಲ್ಲಿ ಗಾಂಧೀಜಿಯವರು ತಂಗಿದ್ದರು. ಅಲ್ಲಿ ಸ್ವಾಮಿ ಶಾಂಭವಾನಂದರು ಅಸ್ಪೃಶ್ಯರಿಗಾಗಿ ಸಲ್ಲಿಸುತ್ತಿರುವ ಸೇವೆಗಾಗಿ ಗಾಂಧೀಜಿ ಸಂತೋಷ ವ್ಯಕ್ತಪಡಿಸಿದರು. ಅಸ್ಪೃಶ್ಯತೆ ದೇವರಿಗೂ ಮನುಷ್ಯರಿಗೂ ಎಸಗಿದ ದ್ರೋಹ, ಶಾಸ್ತ್ರಗಳಲ್ಲಿ ಅಸ್ಪೃಶ್ಯತೆಗೆ ಎಲ್ಲಿಯೂ ಸ್ಥಾನವಿಲ್ಲ ಎಂದು ಗಾಂಧೀಜಿಯವರು ಭಾಷಣ ಮಾಡಿದರು.

ವಿರಾಜಪೇಟೆಯಲ್ಲಿ ನಡೆದ ಸಭೆಯಲ್ಲಿ ಊರಿನ ಮುಸಲ್ಮಾನರು ಹಿಂದೂಸ್ತಾನಿಯಲ್ಲಿ ನೀಡಿದ ಬಿನ್ನವತ್ತಳೆಯ ಬಗ್ಗೆ ಗಾಂಧೀಜಿ ದಕ್ಷಿಣ ಭಾರತದಲ್ಲಿ ಉರ್ದು ವಿದ್ವಾಂಸರನ್ನು ಕಾಣುವುದು ಕಷ್ಟ, ಆದರೆ ಕೊಡಗಿನಲ್ಲಿ ಒಳ್ಳೆಯ ಉರ್ದು ಬರೆಯುವ, ಮಾತನಾಡುವ ಜನ ಇರುವುದು ಸಂತೋಷ ಎಂದು ಉದ್ಗರಿಸಿದರು, ಬಿನ್ನವತ್ತಳೆಯಲ್ಲಿ ಗಾಂಧೀಜಿ ಅಸ್ಪೃಶ್ಯತಾ ನಿವಾರಣೆಗಾಗಿ ಕೈಗೊಂಡ ಯತ್ನಗಳನ್ನು ಉಲ್ಲೇಖಿಸಿ ದೇವರು ನಿಮ್ಮ ಪ್ರಯತ್ನಕ್ಕೆ ಸಫಲತೆ ನೀಡಲಿ, ಈ ದರಿದ್ರ ಮಾನವ ವರ್ಗಕ್ಕೆ ಸಮಾನತೆ ದೊರೆಯಲಿ ಎಂದು ಹೇಳಿದರು, ಸಂಜೆ ಗಾಂಧೀಜಿಯವರು ಗುಂಡುಕುಟ್ಟಿ ಮಂಜುನಾಥಯ್ಯನವರ ಮನೆಯಲ್ಲಿ ತಂಗಿರಲು ಅಲ್ಲಿ ಅವರ ಮನೆಗೆ ಸಮೀಪದಲ್ಲಿ ಇದ್ದ ಕನ್ನಡದ ಖ್ಯಾತ ಕಥೆಗಾರ್ತಿ ಕೊಡಗಿನ ಗೌರಮ್ಮ ಗಾಂಧೀಜಿ ತಮ್ಮ ಮನೆಗೆ ಬರಲೇ ಬೇಕೆಂದು ಹಟ ಹಿಡಿದು ತಮ್ಮ ಮನೆಗೆ ಕರೆದುಕೊಂಡು ಹೋಗಿ ಮಹಾತ್ಮರಿಗೆ ಹರಿಜನ ನಿಧಿಗೆ ಆಭರಣಗಳನ್ನು ನೀಡಿದರು. ಸಂಜೆ ಮಡಿಕೇರಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ಮರುದಿನ ಬೆಳಿಗ್ಗೆ ಅಲ್ಲಿಂದ ಸಂಪಾಜೆ



ಮೂಲಕ ಸುಳ್ಯಕ್ಕಾಗಿ ಗಾಂಧೀಜಿ ಮಂಗಳೂರಿಗೆ ಪ್ರಯಾಣ ಮಾಡಿದರು. ಗಾಂಧೀಜಿಯವರ ಕೊಡಗಿನ ಭೇಟಿಯ ನಂತರ ಕೊಡಗಿನಲ್ಲಿ ನಡೆದಿದ್ದ ಹರಿಜನ ಅಭಿವೃದ್ಧಿ ಕೆಲಸ ಮತ್ತಷ್ಟು ಆಸ್ಥೆಯಿಂದ ನಡೆಯಿತು.

ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿದ ಹೈಸ್ಕೂಲ್ ವಿದ್ಯಾರ್ಥಿಗಳನ್ನು ವಿದ್ಯಾರ್ಥಿ ನಿಲಯಗಳಿಂದ ಹೊರ ಹಾಕಲಾಯಿತು. ವಿದ್ಯಾರ್ಥಿಗಳು ತಮ್ಮ ಬಟ್ಟೆ ಬರೆ, ಟ್ರಂಕುಗಳು, ಹಾಸಿಗೆ ಇವುಗಳನ್ನು ತಲೆಮೇಲೆ ಹೊತ್ತುಕೊಂಡು ಮೆರವಣಿಗೆ ಮಾಡಲು ಅವರಿಗೆ ಒಬ್ಬ ಖಾಸಗಿ ವ್ಯಕ್ತಿಯು ತಮ್ಮ ಮನೆಯನ್ನು ಬಿಟ್ಟುಕೊಟ್ಟರು. ಮಡಿಕೇರಿಯ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಕೊಡಗು ಪತ್ರಿಕಾ ಕಚೇರಿ, ಜಮೀನ್ದಾರರ ಸಂಘದ ಕಚೇರಿಗಳಲ್ಲಿ ಅವಕಾಶ ಮಾಡಿಕೊಡಲಾಯಿತು.

ಮಂಗಳೂರಿನಿಂದ ಬಂದು ಕೊಡಗಿನಲ್ಲಿ ಹರಿಕಥೆ ಪ್ರಚಾರ ಭಾಷಣ ಮಾಡುತ್ತಿದ್ದ ಮಂಗಳೂರಿನ ಲಕ್ಷ್ಮಣದೇವ ವಿದ್ಯಾರ್ಥಿ ಅವರು ಬಂಧನಕ್ಕೆ ಒಳಗಾದರು. ವೀರಾಜಪೇಟೆಯಲ್ಲಿ ವಿದ್ಯಾರ್ಥಿಗಳು ಕ್ರಿಯಾಶೀಲರಾಗಿದ್ದು ಮೆರವಣಿಗೆಗಳನ್ನು ನಡೆಸಿದರು. ಹಳ್ಳಿಗಳಲ್ಲಿ ಕೂಡ ಪ್ರಚಾರ ನಡೆಸಿದರು. ಈ ರೀತಿ ಮೆರವಣಿಗೆ ಸಭೆಗಳು ಪಿಕೆಟಿಂಗ್‌ಗಳು ನಡೆದಾಗಲೇ ಕೆಲವು ವಿಧ್ವಂಸಕ ಕೃತ್ಯಗಳು ನಡೆದವು, ಅಲ್ಲಲ್ಲಿ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು ನಡೆದಿತ್ತು, ಸೋಮವಾರಪೇಟೆ ತಾಲೂಕಿನ ಶನಿವಾರಸಂತೆ, ನಿಡ್ತ, ಸುಂಟಿಕೊಪ್ಪ, ಕೊಡ್ಲಿಪೇಟೆ ಮುಂತಾದ ಕಡೆ ಕೂಡ ಚಳುವಳಿಗಳು ಭರದಿಂದ ಸಾಗಿತು. ನಿಡ್ತ ಕೃಷ್ಣಮೂರ್ತಿ, ಬಿದನೂರು ಮಾದಯ್ಯ, ಹಂಡ್ಲಿ ಮಲ್ಲಪ್ಪ, ತಮ್ಮಯ್ಯ, ಚಂದ್ರಶೇಖರ್, ಬಿ.ಕೆ. ಶಾಂತವೀರಯ್ಯ ಮುಂತಾದವರು ಬಂಧನಕ್ಕೆ ಒಳಗಾದರು. ನವೆಂಬರ್ ತಿಂಗಳವರೆಗೆ ಪ್ರತಿಭಟನೆ ನಡೆಯಿತು.

ಇಂಥ ಚಟುವಟಿಕೆಗಳು ೧೯೪೩ರ ಆರಂಭದವರೆಗೂ ನಡೆಯಿತು. ಜನವರಿ ೨೬ ಕ್ಕೆ ಪೂಜಾರಿ ರಾಮಪ್ಪನವರು ಸ್ವಾತಂತ್ರ್ಯ ದಿನ ಆಚರಿಸಿ ಬಂಧಿತರಾದರು. ಈ ಸಂದರ್ಭದಲ್ಲಿ ಸುಮಾರು ೧೫೦ ಜನ ಬಂಧನಕ್ಕೆ ಒಳಗಾಗಿ ೭೦ ರಿಂದ ೮೦ ಜನ ಶಿಕ್ಷೆಗೆ ಒಳಗಾದರು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಂಡವರು ಅಪಾರ ದೈಹಿಕ ಮಾನಸಿಕ ಕಷ್ಟಗಳನ್ನು ಅನುಭವಿಸಿದರು, ಪೊಲೀಸರಿಂದ ಏಟು, ಚಿತ್ರ

ಹಿಂಸೆಗಳನ್ನು ಅನುಭವಿಸಿದರು ಅನೇಕ ತರುಣರು ಶಾಲೆಗಳನ್ನು ತ್ಯಜಿಸಿ ಮನೆಯಿಂದಲೂ ಬಹಿಷ್ಕೃತರಾದರು, ಜೈಲಿಗೆ ಹೋಗಿ ಬಂದವರನ್ನು ಊರಿನಲ್ಲಿ ಕೆಲವು ಸಂದರ್ಭಗಳಲ್ಲಿ ಮನೆಯವರು, ನೆಂಟರಿಷ್ಟರು ತಮ್ಮ ಮನೆಗೆ ಸೇರಿಸಿಕೊಳ್ಳುತ್ತಿರಲಿಲ್ಲ, ಬ್ರಿಟಿಷರಿಗೆ ನಿಷ್ಠರಾಗಿದ್ದವರು ಇವರನ್ನು ತಾತ್ಸಾರದಿಂದ ನೋಡುತ್ತಿದ್ದರು. ಜೈಲಿನಲ್ಲಿ ಉತ್ತಮ ಆಹಾರ ಇಲ್ಲದೆ ಹುಳ ಬಿದ್ದ ಅಕ್ಕಿಯ ಅನ್ನವನ್ನು ತಿಂದು ಅನೇಕರ ಆರೋಗ್ಯ ಹದಗೆಟ್ಟಿತು.

ಒಟ್ಟಿನಲ್ಲಿ ಭಾರತದಾದ್ಯಂತ ನಡೆದ ಸ್ವಾತಂತ್ರ ಹೋರಾಟದ ರೀತಿ ಇತರರಿಗೆ ತಾವೇನು ಕಡಿಮೆ ಇಲ್ಲ ಎಂಬಂತೆ ಕೊಡಗಿನ ಜನ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದ್ದರು. ಅನೇಕರು ತಮ್ಮ ಮನೆ ಆಸ್ತಿ ಪಾಸ್ತಿ. ಮಕ್ಕಳು ನೆಂಟರಿಷ್ಟರುಗಳನ್ನು ಕಳೆದುಕೊಂಡರು, ಇದರ ಜೊತೆಗೆ ಅಮೂಲ್ಯವಾದ ತಮ್ಮ ಯೌವನವನ್ನು ದೇಶಕ್ಕೆ ಅರ್ಪಿಸಿದರು, ಕೊಡಗಿನ ಜನರು ಎಂದೆಂದಿಗೂ ಸ್ವಾತಂತ್ರ್ಯ ಪ್ರಿಯರು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟರು.

❑

# ಅನುಬಂಧ

## ಛಾಯಾಚಿತ್ರಗಳು



ಓಂಕಾರೇಶ್ವರ ದೇವಸ್ಥಾನ



ರಾಜಸೀಟು



ಮಡಿಕೇರಿಯ ಒಂದು ನೋಟ



ಸ್ವಾತಂತ್ರ್ಯ ಸೇನಾನಿ ಸುಬೇದಾರ್ ಅಪ್ಪಯ್ಯಗೌಡರನ್ನು ಗಲ್ಲಿಗೇರಿಸುವ ಸಂದರ್ಭ




ಮಡಿಕೇರಿಯ ಮನೋಮೋಹಕ ದೃಶ್ಯದ ಒಂದು ನೋಟ





ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಅಪ್ಪಯ್ಯಗೌಡರ ಪ್ರತಿಮೆ



ಮಡಿಕೇರಿಯ ಪ್ರಕೃತಿಯ ಸೊಬಗು



**ಕೊಡಗಿನ ಕಥೆಗಾರ್ತಿ ಗೌರಮ್ಮ**



**ಗುಂಡುಗುತ್ತಿ ಮಂಜುನಾಥಯ್ಯ ದಂಪತಿಗಳು**





**ಕೊಡಗಿನ ಗಾಂಧಿ ಪಾಂಡ್ಯಂಡ ಬೆಳ್ಳಿಯಪ್ಪನವರು**



**ರಾಷ್ಟ್ರಪಿತ ಮಹಾತ್ಮಗಾಂಧಿಜೀಯವರು**



**ಭಾರತದ ಪ್ರಥಮ ಗೃಹಮಂತ್ರಿ ಸರ್ದಾರ್ ವಲ್ಲಭಾಯ್ ಪಟೇಲ್‌ರವರು**

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |